بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 03

ಸಂಚಿಕೆ: 18

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05 ಮೇ 2022, 05 ಹಿಜ್ರತ್ 1401 ಹಿಜರಿ ಶಮ್ಸಿ,
03 ಶವ್ವಾಲ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ.

## ಅಲ್ಲಾಹನ ಉಪದೇಶ

كُلُوْا وَاشْرَبُوْا حَتّٰى يَتَبَيَّنَ لَكُمُ
الْخَيْطُ الْاَبْيَضُ مِنَ
الْخَيْطِ الْاَسْوَدِ مِنَ الْفَجْرِ
ثُمَّ اَتِمُّوا الصِّيَامَ اِلَى الَّيْلِ

**(ಅಲ್‌ಬಖರ : 188)**

**ಅಂದರೆ: ಪ್ರಭಾತದ ಬಿಳಿ ನೂಲು (ರಾತ್ರಿಯ) ಕಪ್ಪು ನೂಲಿನಿಂದ ಬೇರ್ಪಟ್ಟು ನಿಮಗೆ ಕಾಣುವ ತನಕ ನೀವು ತಿನ್ನಲೂ ಕುಡಿಯಲೂಬಹುದು. ಆ ಬಳಿಕ ರಾತ್ರಿಯಾಗುವ ವರೆಗೆ ನೀವು ವ್ರತವನ್ನು ಪೂರ್ಣಗೊಳಿಸಿರಿ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಉಪವಾಸಕ್ಕೆ ಸುಳ್ಳು ಹಾನಿಕಾರಕ ವಿಷವಾಗಿದೆ

**(1903)** ಹಝ್ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಒಬ್ಬ ವ್ಯಕ್ತಿ ಸುಳ್ಳು ಹೇಳುವುದನ್ನು ಮತ್ತು ಸುಳ್ಳನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸದಿದ್ದರೆ, ಅಂತಹ ವ್ಯಕ್ತಿಯು ಅಲ್ಲಾಹನಿಗೊಸ್ಕರ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸುವ ಅಗತ್ಯವಿಲ್ಲ.

### ಉಪವಾಸಿಗನಿಗೆ ಅಗತ್ಯವಾದ ಸೂಚನೆಗಳು

**(1904)** ಹಝ್ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: (ಇಬ್ನೆ ಆದಮ್‌ನ) ಮನುಷ್ಯನ ಪ್ರತಿಯೊಂದು ಕ್ರಿಯೆಯು ಅವನಿಗಾಗಿ ಆಗಿದೆ. ಆದರೆ ಉಪವಾಸವನ್ನು ಹೊರತುಪಡಿಸಿ, ಏಕೆಂದರೆ ಅದು ನನಗಾಗಿದೆ ನಾನು ಅದರ ಪ್ರತಿಫಲವಾಗಿದ್ದೇನೆ ಮತ್ತು ಉಪವಾಸವು ಗುರಾಣಿಯಾಗಿದೆ ಮತ್ತು ನಿಮ್ಮಲ್ಲಿ ಯಾರಾದರೂ ಉಪವಾಸವನ್ನು ಅನುಷ್ಠಿಸಿದರೆ, ಅವನು ಅಶ್ಲೀಲವಾಗಿ ಮಾತನಾಡಬಾರದು ಅಥವಾ ಯಾವುದೇ ಗಲಾಟೆ ಮಾಡಬಾರದು ಮತ್ತು ಯಾರಾದರೂ ಅವನನ್ನು ನಿಂದಿಸಿದರೆ ಅಥವಾ ಜಗಳವಾಡಿದರೆ, ಅವನು ಹೇಳಬೇಕು: ನಾನು ಉಪವಾಸ ಮಾಡುವವನಾಗಿದ್ದೇನೆ. ಮತ್ತು ಮುಹಮ್ಮದ್(ಸ)ರ ಆತ್ಮ ಯಾರ ಕೈಯಲ್ಲಿದೆಯೋ ಅವನ ಆಣೆ! ಖಂಡಿತವಾಗಿಯೂ ಉಪವಾಸಿಗನ ಬಾಯಿಯ ವಾಸನೆಯು ಅಲ್ಲಾಹನಿಗೆ ಕಸ್ತೂರಿಯ ವಾಸನೆಗಿಂತ ಹೆಚ್ಚು ಇಷ್ಟವಾಗುತ್ತದೆ. ಉಪವಾಸ ಮಾಡುವವನಿಗೆ ಎರಡು ಸಂತೋಷಗಳು ಅವನನ್ನು ಸಂತೋಷಪಡಿಸುತ್ತವೆ. ಮೊದಲನೆಯ ಸಂತೋಷವೆಂದರೆ ಅವನು ಇಫ್ತಾರ್ (ಉಪವಾಸವನ್ನು ಮುರಿಯುವ ಸಮಯ) ಮಾಡುವಾಗ ಆಗುತ್ತದೆ ಮತ್ತು ಎರಡನೆಯದು ಅವನು ತನ್ನ ಸೃಷ್ಠಿಕರ್ತನನ್ನು ಭೇಟಿಯಾದಾಗ ಅವನು ತನ್ನ ಉಪವಾಸದ ಕಾರಣದಿಂದಾಗಿ ಸಂತೋಷ ಪಡುತ್ತಾನೆ.

**(ಸಹೀಹ್ ಬುಖಾರಿ, ಸಂಪುಟ 3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

**ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ.**
**ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದೊಂದು ಸೂಕ್ಷ್ಮ ವಿಷಯವಾಗಿದೆ ಓರ್ವ ವ್ಯಕ್ತಿಯು (ಅವನ ಸೋಮಾರಿತನದಿಂದಾಗಿ) ಉಪವಾಸವು ಕಠಿಣವಾಗಿದ್ದರೆ ಮತ್ತು ಅವನು ತನ್ನ ಮನಸ್ಸಿನಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ, ನಾನು ಒಂದು ಸಮಯದಲ್ಲಿ ತಿನ್ನದಿದ್ದರೆ ನನ್ನ ಆರೋಗ್ಯದಲ್ಲಿ ತೊಂದರೆಗಳನ್ನು ಉಂಟಾಗಬಹುದು ಎಂದು ಭಾವಿಸಿದರೆ ಅಂತಹ ವ್ಯಕ್ತಿಯು ಅಲ್ಲಾಹನ ಅನುಗ್ರಹವನ್ನು ಸ್ವತಃ ತನ್ನ ಮೇಲೆ ಕಠಿಣವಾಗಿರಿಸುವವನು. ಅವನು ಹೇಗೆ ಅಲ್ಲಾಹನ ಅನುಗ್ರಹವನ್ನು ಪಡೆಯುತ್ತಾನೆ. ಹಾಂ! ಯಾರು ತನ್ನ ಮನಸ್ಸಿನಲ್ಲಿ ರಮಝಾನ್‌ನ ಆಗಮನದ ಕುರಿತು ಸಂತೋಷಗೊಳ್ಳುತ್ತಾನೊ ಆತನು ರಮಝಾನ್‌ನ ಪವಿತ್ರ ಮಾಸ ಯಾವಾಗ ಬರುವುದೊ, ಯಾವಾಗ ಉಪವಾಸಗಳನ್ನು ಅನುಷ್ಠಿಸುವುದೊ ಮತ್ತು ಆತನು ತನ್ನ ಅನಾರೋಗ್ಯದಿಂದಾಗಿ ಉಪವಾಸಗಳನ್ನು ಅನುಷ್ಠಿಸದಿದ್ದರೆ ಆತನ ಆಕಾಶದಲ್ಲಿ ಉಪವಾಸಗಳಿಂದ ವಂಚಿತನಾಗಿರುವುದಿಲ್ಲ. ಈ ಲೋಕದಲ್ಲಿ ಅನೇಕ ಜನರು ನೆಪಗಳನ್ನು ಮಾಡುವವರಾಗಿದ್ದರೆ ಅವರು ಯೋಚಿಸುವುದೇನೆಂದರೆ ನಾವು ಹೇಗೆ ಲೋಕದ ಜನರನ್ನು ಮೋಸಗೊಳಿಸುತ್ತೇವೊ ಹಾಗೆಯೇ ಅಲ್ಲಾಹನ್ನು ಸಹ ಮೊಸಗೊಳಿಸುತ್ತೇವೆ. ನೆಪ ಮಾಡುವವರು ತಮ್ಮ ಕಡೆಯಿಂದಲೇ ಅನೇಕ ಸಮಸ್ಯೆಗಳನ್ನು ಸೃಷ್ಠಿಸಿಕೊಳ್ಳುತ್ತಾರೆ ಮತ್ತು ಅನಾನುಕೂಲಗಳನ್ನು ಸೇರಿಸಿ ಈ ಸಮಸ್ಯೆಗಳನ್ನು ಸಮರ್ಥಿಸುತ್ತಾರೆ. ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಅವು ಮಾನ್ಯವಾಗಿಲ್ಲ, ತೊಂದರೆಗಳ ವಿಷಯವು ಬಹಳ ವಿಷಾದವಾಗಿದೆ ಮನುಷ್ಯನು ಬಯಸಿದರೆ ಅವನು ತನ್ನ ಜೀವನದುದ್ದಕ್ಕೂ ಕುಳಿತು ಪ್ರಾರ್ಥಿಸುತ್ತಿದ್ದರು ಮತ್ತು ರಮಝಾನ್‌ನಲ್ಲಿ ಉಪವಾಸಗಳನ್ನು ಅನುಷ್ಠಿಸದಿದ್ದರು, ಅಲ್ಲಾಹನು ಆತನ ಉದ್ದೇಶ ಮತ್ತು ಪ್ರಾಮಾಣಿಕತೆಯನ್ನು ತಿಳಿದಿದ್ದಾನೆ, ಆತನು ಎಂತಹ ಪ್ರಾಮಾಣಿಕನಾಗಿದ್ದಾನೆ ಎಂದು. ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಅರಿವಿದೆ ಆತನ ಮನಸ್ಸಿನಲ್ಲಿ ನೋವು ಇದೆ ಮತ್ತು ಅಲ್ಲಾಹನು ಆತನಿಗೆ ಪ್ರತಿಫಲಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ ಏಕೆಂದರೆ ಹೃದಯದ ನೋವು ಅಮೂಲ್ಯವಾದ ವಸ್ತುವಾಗಿದೆ. ಮನುಷ್ಯನು ನೆಪವನ್ನು ಮಾಡುತ್ತಾನೆ ಆದರೆ ಅಲ್ಲಾಹನ ಮುಂದೆ ಈ ನೆಪಗಳು ಯವ ವಸ್ತುವಲ್ಲ. ನಾನು ಆರು ತಿಂಗಳು ಉಪವಾಸಗಳನ್ನು ಅನುಷ್ಠಿಸಿದಾಗ ಒಮ್ಮೆ ಒಂದು ಪ್ರವಾದಿಗಳ ಗುಂಪು ನನ್ನನ್ನು (ಕಾಶ್ಫ್‌ನಲ್ಲಿ) ಭೇಟಿಯಾದರು ಅವರು ಹೇಳಿದರು: ನೀನು ನಿನ್ನ ಆತ್ಮವನ್ನು ಏಕೆ ಇಷ್ಟು ಕಷ್ಟದಲ್ಲಿ ಸಿಲುಕಿಸುತ್ತೀಯ, ಅದರಿಂದ ಹೊರಬರು. ಹೀಗೆ ಮನುಷ್ಯ ತನ್ನನ್ನು ತಾನು ಅಲ್ಲಾಹನಿಗಾಗಿ ತೊಂದರೆಗಳನ್ನು ಅನುಭವಿಸಿದರೆ ಅವನು ಸ್ವತಃ ಪೋಷಕರಂತೆ ಕರುಣೆ ತೋರಿಸಿ ನೀನು ಏಕೆ ತೊಂದರೆಯಲ್ಲಿದ್ದೀಯ ಎಂದು ಕರುಣೆ ತೋರುತ್ತಾನೆ.

### ಸರ್ವಶಕ್ತನಾದ ಅಲ್ಲಾಹನ ಕರುಣೆ

ಕಷ್ಟತೆಗಳಿಂದ ಹಾಗೂ ತೊಂದರೆಗಳಿಂದ ವಂಚಿತರಾಗಿರಿಸುವ ಜನರು ಇವರೇ ಆಗಿದ್ದಾರೆ, ಆದುದರಿಂದ ಪರಮಾತ್ಮನು ಅವರನ್ನು ಬೇರೆ ಕಷ್ಟಗಳಿಗೆ ಸಿಲುಕಿಸಿ ಹೊರತೆಗೆಯದೆ ತಾವೇ ಕಷ್ಟದಲ್ಲಿರುವ ಇತರರನ್ನು ಹೊರತೆಗೆಯುತ್ತಾನೆ. ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ. ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ. ಬೆಂಕಿಯಲ್ಲಿ ಬೀಳಲು ಬಯಸುವ ಇಬ್ರಾಹೀಮ್(ಅ)ರ ಕಥೆಯನ್ನು ಪರಿಗಣಿಸಿ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಬೆಂಕಿಯಿಂದ ರಕ್ಷಿಸುತ್ತಾನೆ ಮತ್ತು ಯಾರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೊ ಅವರಿಗೆ ಬೆಂಕಿಗೆ ಎಸೆಯಲಾಗುತ್ತದೆ.

**(ಮಲ್‌ಫೂಝಾತ್, ಸಂಪುಟ–2, ಪುಟ–564, ಖಾದಿಯನ್ 2003)**

**ಖುರ್‌ಆನ್ ಅನ್ನು ಲೋಕದಾದ್ಯಂತ ತಲುಪಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಅದರ ಅವತರಿಣಿಕೆ ಸರ್ವಲೋಕಗಳಿಗಾಗಿವೆ. ಅದು ಸರ್ವಲೋಕಗಳ ಸಂಪತ್ತಾಗಿದೆ. ಒಬ್ಬ ಕ್ರೈಸ್ತನು ಹೇಳುತ್ತಾನೆ. "ಖುರ್‌ಆನ್‌ನ ಮಹಾನತೆ ಏನೆಂದರೆ ಅದನ್ನು ಎಲ್ಲ ಸಭೆಗಳಲ್ಲಿ ಪಠಿಸಬಹುದಾಗಿದೆ. ಆದರೆ ನಮ್ಮ ಗ್ರಂಥಗಳು ಎಲ್ಲಾ ಸಭೆಗಳಲ್ಲಿ ಓದುವ ಹಾಗಿಲ್ಲ.**

ಸಯ್ಯಿದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ವಚನ 44 **ಬಿಲ್‌ಬೈಯಿನಾತಿ ವಝ್ಝುಬುರಿ, ಅನ್‌ಝಲ್‌ನಾ ಇಲೈಕಝ್ಝಿಕ್ರ ಲಿತುಬೈಯಿನ ಲಿನ್ನಾಸಿ ಮಾ ನುಝ್ಝಿಲ ಇಲೈಹಿಮ್ ವಲಅಲ್ಲಹುಮ್ ಯತಫಕ್ಕರೂನ್** ರ

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی العَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ರಾಜಕುಮಾರ ವಲಾ ಗೋಹರ್ Extra Assitant Jehlum ರವರಿಗೆ ಪಂಥಹ್ವಾನ

**ಬನ್ನಿ, ನಮ್ಮ ಸಮಕ್ಷಮದಲ್ಲಿ ನಮ್ಮ ಗ್ರಂಥಗಳನ್ನು ನೋಡಿ ಸಹ ಹತ್ಯೆಯ ವಿವರ ಸಾಬೀತಾಗಿಲ್ಲ ಎಂದರೆ ಅದೇ ಜಲ್ಸಾದಲ್ಲಿ ನಿಮಗೆ ಎರಡು ನೂರು ರೂಪಾಯಿಗಳ ಬಹುಮಾನ ನೀಡಲಾಗುವುದು.**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಹ್ವಾನ ನಾವು ಅವರ ಗ್ರಂಥ "ಅಯ್ಯಮುಸ್ಸುಲಹ್" ರೂಹಾನಿ ಖಝಾಯೀನ್ ಸಂ. 14 ರಿಂದ ಪ್ರಸ್ತುತವಿದೆ.

ರಾಜಕುವಾರ ಅಬ್ದುಲ್ ಮಜೀದ್ ಎಂಬ ಓರ್ವ ವ್ಯಕ್ತಿ ಲೂಧಿಯಾನ ಮೊಹಲ್ಲ ಇಕ್ಬಾಲ್‌ಗಂಜ್‌ಯಿಂದ 6 ಜೂನ್ 1998 ರಂದು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಒಂದು ಪತ್ರ ಬರೆದನು. ರಾಜಕುಮಾರ ವಾಲಾ ಗೋಹರ್ extra Assitant Jehlum ನನ್ನ ಬಗ್ಗೆ "ಸಿರಾಜುಲ್ ಅಖ್ಬಾರ್" ಪತ್ರಿಕೆಯಲ್ಲಿ ನಾನು ಅಹ್ಮದಿ ಅತ್ತಿನಿಂದ ದೂರವಾಗಿದ್ದೇನೆ ಎಂದು ಪ್ರಕಟಣೆ ನೀಡಿದ್ದರು. ಅದಕ್ಕೆ ಕಾರಣವೇನೆಂದರೆ ಅವರು ತನ್ನ ವಿಶ್ವಾಸದ ಬಗ್ಗೆ ಇರುವ ದೋಷಗಳನ್ನು ನನ್ನ ಮೇಲೆ ಸಾಬೀತುಗೊಳಿಸಿದ್ದಾರೆ. ಇದು ಅಪ್ಪಟ ಸುಳ್ಳಾಗಿದೆ, ಆಧಾರ ರಹಿತ ವಿಷಯವಾಗಿದೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇವರಿಬ್ಬರು  ನಿಕಟ ಸಂಬಂದಿಗಳಾಗಿದ್ದಾರೆ. ಆದರೆ ಒಬ್ಬರಿಗೆ ಅಲ್ಲಾಹನು ಸನ್ಮಾರ್ಗವನ್ನು ತೋರಿಸಿದ್ದಾನೆ ಮತ್ತು ಸತ್ಯದೆಡೆ ಅನುಗ್ರಹಿಸಿದ್ದಾನೆ, ಇನ್ನೊಬ್ಬರಿಗೆ ಮಿಥ್ಯವೇ ಇಷ್ಟವಾಗಿದೆ. **"ವ ಝಾಲಿಕ್ ಫಝ್‌ಲುಲ್ಲಾಹಿ ಯಹ್ದಿ ಮೈಂಯಶಾಉ ವ ಯುಝಿಲ್ಲು ಮೈಂಯಶಾಉ** ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರಾಜಕುಮಾರ ಅಬ್ದುಲ್ ಮಜೀದ್ ಅವರ ಸಂಪೂರ್ಣ ಪತ್ರವು "ಅಯ್ಯಾಮುಸ್ಸುಲಹ್" ರೂಹಾನಿ ಖಝಾಯನ್ ಸಂಪುಟ 14 ರಲ್ಲಿ ಪುಟ 374–380 ವರೆಗೆ ಪ್ರಕಟಿಸಿದರು. ಪತ್ರದ ಪ್ರಾರಂಭದಲ್ಲಿ ಅಬ್ದುಲ್ ಮಜೀದ್ ಸಾಹಿಬ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸ್ತುತಿಯಲ್ಲಿ 20 ಸಾಲುಗಳ ಫಾರ್ಸಿ ಭಾಷೆಯಲ್ಲಿ ಒಂದು ಅತ್ಯಂತ ಸುಂದರವಾದ ಪ್ರಿಯವಾದ ಕಥೆಯನ್ನು ಬರೆದಿದ್ದಾರೆ. ಅದಾದ ನಂತರ ಮತ್ತೆ ಹೀಗೆ ಬರೆದಿದ್ದಾರೆ. ನಾನು ನಿಮ್ಮಿಂದ ಹೊಸ ಜೀವನ ಪಡೆದಿದ್ದೇನೆ. ಹೀಗಿರುವಾಗ ನಿಮ್ಮನ್ನು ತೊರೆಯಲು ಹೇಗೆ ಸಾಧ್ಯ. ಅವರ ಪತ್ರದ ಕೆಲವು ಸಾಲುಗಳು ಓದುಗರ ವಿಶ್ವಾಸವೃದ್ಧಿಗೋಸ್ಕರ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಬರೆಯುತ್ತಾರೆ ಮಹಾತ್ಮರುಗಳೇ, ನಾನು ನಿಮ್ಮ ದರ್ಶನದಿಂದ ವಂಚಿತನಾದರೂ ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರೀತಿ ಗೌರವ ಮತ್ತು ಆದರ ಹಾಗೂ ಅನುಸರಣೆ ಮತ್ತು ಅವ್ಯಾಹತವಾದ ಅವರ ಸ್ಮರಣೆಯು ನನ್ನ ಆತ್ಮ ಮತ್ತು ಜೀವದ ಒಂದು ಅಂಶವೆ ಆಗಿದೆ. ಹೀಗಿರುವಾಗ ನಾನು ತನ್ನ ಜೀವದಿಂದ ಹೇಗೆ ಪ್ರತ್ಯೇಕಗೊಳ್ಳಲು ಸಾಧ್ಯ.

ನನ್ನ ಪ್ರಿಯರೇ! ನನ್ನ ಹೃದಯದ ಅಹವಾಲು ಎಲ್ಲ ಬಲ್ಲವನಾದ ಆ ದೇವನಿಂದ (ಅಲ್ಲಾಹನಿಂದ) ಅರಿಯಿರಿ. (ಏಲ್ಲಾ ಯು ನಬ್ಬಿಉಕ್ ...) ನನ್ನ ಒಡೆಯನೇ ಅಲ್ಲಾಹನ ಮತ್ತು ಅವನ ಪ್ರವಾದಿಯ ಜ್ಞಾನ ಕೊಟ್ಟವರೇ ನೀವು, ಸ್ವರ್ಗದ ಹಾದಿ ತೋರಿಸಿದವರೇ ನೀವು, ನೀವೇ ಖುರ್‌ಆನ್ ಕಲಿಸಿದವರು. ನಾವು ಅಜ್ಞಾನದಲ್ಲಿ ಮುಳುಗಿ ಹೋಗಿದ್ದೆವು. ಆಗ ಎಚ್ಚರಿಸಿದವರು ನೀವು, ನಾವು ಬರೀ ಹೆಸರಿನ ಮತ್ತು ಕಂದಾಚಾರ ಮುಸಲ್ಮಾನರಾಗಿದ್ದೆವು. ನೀವು ನಮಗೆ ಯಥಾರ್ಥ ಇಸ್ಲಾಂ ಧರ್ಮ ಜ್ಞಾನ ನೀಡಿರುವಿರಿ, ದುಆ ಏನು ಎಂಬುದೇ ನಾವು ತಿಳಿದಿರಲಿಲ್ಲ. ತಖ್ವಾ ಎಂದರೇನು ಗೊತ್ತಿರಲಿಲ್ಲ, ನೀವೆ ಆ ಬಗ್ಗೆ ಅರಿಕೆ ಮಾಡಿಕೊಟ್ಟವರು. ಸರಕಾರಗಳ ಹಕ್ಕುಗಳು ನಮ್ಮ ಮೇಲೆ ಯಾವುವು ಇವೆ ಆ ಬಗ್ಗೆಯ ನಿಷ್ಠೆ ಅನುಸರಣೆ ರೀತಿ ರಿವಾಜು ಮನವರಿಕೆ ಮಾಡಿಕೊಟ್ಟವರು ನೀವು. ಅಂತೂ ಎಲ್ಲಿಯವರೆಗೆ ನಿಮ್ಮ ಉಪಕಾರಗಳನ್ನು ಬರೆಯಲಿ. ಅವು ಅಸಂಖ್ಯಾತವಾಗಿವೆ. ನೀವೇ ನಮ್ಮ ಒಡೆಯರು, ನೀವೇ ನಮ್ಮ ನೇತಾರರು, ನಾವು ನಿಮ್ಮ ಸೇವಕರು, ನಿಮ್ಮ ದಾಸರು, ನಿಮ್ಮನ್ನು ಬಿಟ್ಟು ಅಲ್ಲಾಹನ ಶಾಪ ಗಳಿಸುವುದೇ?

ರಾಜಕುಮಾರ ವಾಲಾಗೋಹರ್ extra Assitant Jehlum ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ಏನೇನು ಆರೋಪ ಮಾಡಿದ್ದರೋ ಅದನ್ನೆಲ್ಲ ತನ್ನ ಪತ್ರದ ಕೊನೆಯಲ್ಲಿ ನಮೂದಿಸಿದ್ದರು. ಏಕೆಂದರೆ ಹಝ್ರತ್ ಮಸೀಹ್ ಮೌಊದ್(ಅ) ಆ ಬಗ್ಗೆ ತಿಳಿಯುವಂತಾಗಲಿ ಎಂದು. ರಾಜಕುಮಾರ ವಾಲಾ ಗೋಹರ್ ಮಾಡಿದ ಅವರ ಆರೋಪಗಳಿಂದ ಕೆಲವು ನಾವು ಇಲ್ಲಿ ನಮೂದಿಸುತ್ತಿದ್ದೆವೆ.

1) ಕೇವಲ ಈಸ ಪದ ಅಥವಾ ಮಸೀಹ್ ಎಂದಷ್ಟೇ ಹದೀಸುಗಳಲ್ಲಿ ಇರುತ್ತಿದ್ದರೆ ಪ್ರತಿಬಿಂಬ (ಸಾದೃಶ್ಯ ರೂಪ) ದ ಅವಶ್ಯಕತೆ ಇತ್ತು. ಆದರೆ ಇಬ್ನು ಮರಿಯಮ್ ಎಂದು ಹೇಳಿರುವ ಕಾರಣ ಅವರೇ (ಅಸಲು) ಆಗಮಿಸುವುದು ಸಾಬೀತಾಗುತ್ತದೆ.

2) ಅವರು ಹೇಳುತ್ತಾರೆ.  ವಾಗ್ದತ್ತ ಮಸೀಹನ ಪೈಕಿ ಒಂದು ಅಚ್ಚರಿಯ ಮಾತು ತೆಗೆದುಕೊಂಡಿದ್ದಾರೆ,  ಅದೇನೆಂದರೆ–ಮಸೀಹರು ದಾವೇ ಹೂಡುವಾಗ ನಾನು ಅವರ ತಂದೆ ತಾಯಿಯವರನ್ನು ಶೋಧಿಸುವೆನು. ಏಕೆಂದರೆ ತಂದೆಯಂತೂ ಮೊದಲೇ ಅವರಿಗೆಲ್ಲ ಮತ್ತು ತಾಯಿ ತೀರಿ ಹೋಗಿದ್ದಾಳೆ. ಅಂದಹಾಗೆ ಅವರ ತಂದೆ–ತಾಯಿಯವರನ್ನು ಸಾಬೀತುಗೊಳಿಸಲು ಆಗಲಿಲ್ಲ ಎಂದರೆ ಮತ್ತೆ ಅವರ ಮಸೀಹ ಆಗುವುದರಲ್ಲಿ ಯಾವ ಸಂಶಯ ಉಳಿಯುತ್ತದೆ.

3) ಹುಝೂರ್(ಅ) ರವರ ಮೇಲೆ ವ್ಯಕ್ತಿಗತ ಆರೋಪಗಳನ್ನು ಹಚ್ಚುತ್ತಾ ಹೇಳುತ್ತಾರೆ, ಸಾಮರ್ಥ್ಯವಿದ್ದರೂ ಅವರು (ಅ) ಏಕೆ ಹಜ್ ಮಾಡುತ್ತಿಲ್ಲ, ಸಾವಿರಾರು ರೂಪಾಯಿಗಳ ಬಹುಮಾನಗಳ ಜಾಹೀರಾತು ನೀಡುತ್ತಾರೆ. ಆದರೆ ಹಜ್ ಏಕೆ ಮಾಡುವುದಿಲ್ಲ.

4) ಬರಾಹೀನನ ಉಳಿದ ಭಾಗ ಪ್ರಕಟಿಸುತ್ತಿಲ್ಲ.

5) ಆತಮನ ಭವಿಷ್ಯವಾಣಿ ತಪ್ಪಿ ಹೋಯಿತು. ಅವರ ರುಜುಪಡಿಸುವಿಕೆಯನ್ನು ನಾನು ನಂಬುವುದಿಲ್ಲ.

6) ಲೇಖರಾಮನ ಭವಿಷ್ಯವಾಣಿಯಲ್ಲಿ ಅವನ ಹತ್ಯೆಯ ಬಗ್ಗೆ ವಿವರವಿಲ್ಲ. ಕೇವಲ **ನಸಬುಂ ವ ಅಝಾಬುನ್** ಎಂಬ ವಾಕ್ಯವಿದೆ. ಅದರಲ್ಲಿ ಹತ್ಯೆಯ ಕುರಿತು ವಿವರಿಸಲಾಗಲಿಲ್ಲ. ಮತ್ತು ಅವರು ಹೇಳುತ್ತಾರೆ. ಒಂದು ವೇಳೆ ಅದು ಸತ್ಯ ಎಂದಾದರೂ ಒಳ್ಳೆಯದೇ, ಲೇಖರಾಮ ಒಬ್ಬ ಸಾಧಾರಣ ಮನುಷ್ಯನಾಗಿದ್ದ. ಆದರೆ ಈ ಭವಿಷ್ಯವಾಣಿಯಿಂದ ಅವನು ತನ್ನ ಸಮುದಾಯದಲಿ ಗೌರವ ಪಡೆದನು. ಹುತಾತ್ಮ ಎಂದು ಪರಿಗಣಿಸಿದಂತಾಯಿತು. ಅವನು ಕುಟುಂಬಸ್ಥರಿಗೆ ಸಾವಿರಾರು ರೂಪಾಯಿಗಳ ಚಂದಾ ಹರಿದು ಬಂತು. ಅದಾಯಿತು, ಇದಾಯಿತು ಎಂದು ಹೇಳುತ್ತಾ ಹೇಳುತ್ತಾರೆ.  ಈ ರೀತಿಯ ಭವಿಷ್ಯವಾಣಿ ತನ್ನ ಕುರಿತು ಆದರೂ ಒಳ್ಳೆಯದೆಂದು ಭಾವಿಸುತ್ತೇನೆ.

7) ಕಸೂಫ್ ಖಸೂಫ್ (ಚಂದ್ರ, ಸೂರ್ಯ ಗ್ರಹಣ) ಕುರಿತ ಹದೀಸು ದುರ್ಬಲವಾಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರಾಜಕುಮಾರ ವಾಲಾ ಗೋಹರ್ ಅವರ ಎಲ್ಲ ಆರೋಪಗಳಿಗೆ ಉತ್ತರವನ್ನು ನೀಡಿದ್ದಾರೆ. ಅವರ (ಅ) ಬಹುಮಾನದ ಪಂಥ್ವಾನಕ್ಕೆ ಸಂಬಂಧಿತ ಆರೋಪ, ಆರೋಪ ನಂಬ್ರ 6 ಆಗಿದೆ. ಅವರ ಉತ್ತರವಾಗಿ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದರು.  ಹತ್ಯೆಯ ಕುರಿತು ವಿವರ ಸಾಬೀತಾಗಿಲ್ಲ ಎಂದಾದರೆ ಅವರಿಗೆ ನಾನು ಎರಡು ನೂರು ರೂಪಾಯಿಗಳ ಬಹುಮಾನ ನೀಡುವೆನು.

ಲೇಖರಾಮನ ಭವಿಷ್ಯವಾಣಿಯನ್ನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಹಲವು ಗ್ರಂಥಗಳಲ್ಲಿ ಸವಿವರವಾಗಿ ಪ್ರಸ್ತಾಪ ಮಾಡಿರುತ್ತಾರೆ.  ಆ ಭವಿಷ್ಯವಾಣಿಯ ಭಾಗ ಅದರಲ್ಲಿ ವಿವರಗಳನ್ನು ನೀಡಲಾಗಿದೆ, ಇದರಿಂದ ತಿಳಿದು ಬರುವುದೇನೆಂದರೆ ಭವಿಷ್ಯವಾಣಿಯಲ್ಲಿ ಅಲ್ಲಾಹನು ಸಾಂಕೇತಿಕವಾಗಿ ತೋರಿಸಿರುತ್ತಾನೆ. ಲೇಖರಾಮನ ಸಾವು ಹತ್ಯೆಯಿಂದಾಗುವುದು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥ "ಆಯಿನಾ ಕಮಾಲಾತೆ ಇಸ್ಲಾಂ" ನಲ್ಲಿ ಹೇಳುತ್ತಾರೆ  ತಿಳಿದಿರಲಿ ಈ ವಿನೀತನು 20 ಫೆಬ್ರವರಿ 1886 ರ ಜಾಹೀರಾತನ್ನು ಈ ಗ್ರಂಥದೊಂದಿಗೆ ಸೇರಿಸಲಾಗಿತ್ತು. ಇಂದ್ರಮಿನ್ ಮುರಾದಾಬಾದಿ ಮತ್ತು ಲೇಖರಾಮ ಪೆಶಾವರಿ ಅವರಿಗೆ ಈ ಆಹ್ವಾನ ನೀಡಲಾಗಿತ್ತು. ಅವರುಗಳು ಬಯಸುವುದಾದರೆ ಅವರ ವಿಧಿ ಸಾವು ನೋವಿನ ಬಗ್ಗೆ ಭವಿಷ್ಯವಾಣಿಗಳನ್ನು ಪ್ರಕಟಿಸಲಿ ಅಂದಹಾಗೆ ಈ ಜಾಹೀರಾತಿನ ನಂತರ ಇಂದ್ರಮನ್ ಅದನ್ನು ಕಡೆಗಣಿಸಿದನು

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಮುಖಾಂತರ ನಮ್ಮ ಮೇಲೆ ಔದಾರ್ಯ ತೋರಿರದಿದ್ದರೆ ನಾವು ನಾಶವಾಗುವ ಸಾಧ್ಯತೆಯಿತ್ತು ಮತ್ತು ನಾವು ಝಕಾತಿನ ವಸೂಲಿಗಾಗಿ ಯುದ್ಧ ಮಾಡುವೆವು ಹಾಗೂ ಮರಣ ಬರುವ ತನಕ ನಾವು ಅಲ್ಲಾಹನ ಆರಾಧನೆ ಮಾಡುತ್ತಿರುವೆವು ಎಂಬ ವಿಷಯದ ಮೇಲೆ ಹಝ್ರತ್ ಅಬೂಬಕರ್(ರ) ನಮ್ಮನ್ನು ಒಟ್ಟುಗೂಡಿಸಿದ್ದರು ಎಂದು ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡಿರುವರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಬಹುತೇಕ ಅರೇಬಿಯರ ಧರ್ಮತ್ಯಾಗ ಮತ್ತು ಝಕಾತ್ ನೀಡುವುದರಿಂದ ನಿರಾಕರಣೆಯ ನಂತರ ಹಝ್ರತ್ ಅಬೂಬಕರ್(ರ) ಅವರೆಲ್ಲರೊಂದಿಗೆ ಯುದ್ಧ ಮಾಡಿದರು. ಇಂತಹ ಎಲ್ಲ ವ್ಯಕ್ತಿಗಳನ್ನು ಧರ್ಮತ್ಯಾಗಿಗಳು ಎಂದು ಚರಿತ್ರೆಯ ಪುಸ್ತಕಗಳಲ್ಲಿ ಕರೆಯಲಾಗಿದೆ. ಆದ್ದರಿಂದಲೇ ಧರ್ಮತ್ಯಾಗಿಗಳಿಗೆ ಮರಣದಂಡನೆ ವಿಧಿಸಬೇಕು ಮತ್ತು ಆದ್ದರಿಂದಲೇ ಹಝ್ರತ್ ಅಬೂಬಕರ್(ರ) ಎಲ್ಲ ಧರ್ಮತ್ಯಾಗಿಗಳ ವಿರುದ್ಧ ಜಿಹಾದ್ ಮಾಡಿದ್ದರು ಹಾಗೂ ಪುನಃ ಇಸ್ಲಾಂ ಧರ್ಮ ಸ್ವೀಕಾರ ಮಾಡದವರನ್ನು ವಧಿಸಿದರು ಎಂಬ ತಪ್ಪುಧಾರಣೆ ಚರಿತ್ರೆಗಾರರಲ್ಲಿ ಮತ್ತು ಪಂಡಿತರಲ್ಲಿ ಉಂಟಾಗಿದೆ. ಹೀಗೆ ಹಝ್ರತ್ ಅಬೂಬಕರ್(ರ)ರನ್ನು ಖತಮುನ್ನುಬುವ್ವತ್ ವಿಶ್ವಾಸದ ಸಂರಕ್ಷಕ ಮತ್ತು ಅದರ ಹೀರೋ ರೂಪದಲ್ಲಿ ಚರಿತ್ರೆಗಾರರು ಮುಂದಿರಿಸಿರುವರು.**

**ಪವಿತ್ರ ಖುರ್‌ಆನ್‌ನ ಆಯತ್‌ಗಳಿಂದ, ಪ್ರವಾದಿಯ(ಸ) ಹದೀಸ್, ಪವಿತ್ರ ಖುರ್‌ಆನ್‌ನ ವ್ಯಾಖ್ಯಾನದ ಗ್ರಂಥಗಳಿಂದ ಮತ್ತು ಇಸ್ಲಾಮಿನ ಇತಿಹಾಸದ ಪುಸ್ತಕಗಳಿಂದ, ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅಹ್ಮದಿ ಖಲೀಫರ ಉಪದೇಶಗಳಿಂದ ಇಸ್ಲಾಮಿನಲ್ಲಿ ಧರ್ಮತ್ಯಾಗಿಯ ಶಿಕ್ಷೆಯ ಕುರಿತು ಚರ್ಚೆ.**

**ಅಮೇರಿಕದಲ್ಲಿ ನೆಲೆಸಿದ್ದ ನಿವೃತ್ತ ಮುರಬ್ಬಿ ಸನ್ಮಾನ್ಯ ಬಶೀರ್ ಅಹ್ಮದ್ ಶಾದ್ ಸಾಹಿಬ್, ಸಿಯಾಲ್‌ಕೋಟಿನ ಸನ್ಮಾನ್ಯ ರಾನಾ ಮುಹಮ್ಮದ್ ಸಿದ್ದೀಖ್ ಸಾಹಿಬ್ ಮತ್ತು ಸನ್ಮಾನ್ಯ ಡಾಕ್ಟರ್ ಮಹ್ಮೂದ್ ಅಹ್ಮದ್ ಖಾಜಾ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **01-04-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ)ರ ಕಾಲದ ಪಿತೂರಿಗಳ ಕುರಿತು ಪ್ರಸ್ತಾಪ ನಡೆಯುತ್ತಿತ್ತು. ಈ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥವಾದ "ಸಿರ್ರುಲ್‌ಖಿಲಾಫದಲ್ಲಿ ಹೇಳುತ್ತಾರೆ: ಬನೂ ತೈ, ಬನೂ ಅಸದ್ ತುಲೈಹ, ಬನೂ ಗತ್‌ಫಾನ್, ಬನೂ ಹವಾಝುನ್ ಮತ್ತು ಬನೂ ಸಲೀಂ ಗೋತ್ರಗಳು ಸಮೇತ ಅರೇಬಿಯದ ಜನಸಾಮಾನ್ಯರು ಮತ್ತು ವಿಶಿಷ್ಟ ಜನರು ಧರ್ಮತ್ಯಾಗ ಮಾಡಿದರು ಮತ್ತು ಅವರು ಝಕಾತ್ ನೀಡುವುದನ್ನು ನಿಲ್ಲಿಸಿದರು ಎಂದು ಇಬ್ನು ಖುಲ್‌ದೂನ್ ಮತ್ತು ಇಬ್ನು ಅಸೀರ್ ಬರೆದಿರುವರು. ಹಝ್ರತ್ ಪೈಗಂಬರ್(ಸ)ರ ನಿಧನ, ಮುಸ್ಲಿಮರು ಸಂಖ್ಯೆಯಲ್ಲಿ ಕಡಿಮೆ ಇರುವುದು ಮತ್ತು ಶತ್ರುಗಳು ಅಧಿಕವಿರುವುದರ ಕಾರಣದಿಂದ ಮಳೆಯ ರಾತ್ರಿಯಲ್ಲಿ ಭಯದಿಂದ ಆಡು ಕುರಿಗಳು ಒಂದೆಡೆ ಒಟ್ಟು ಸೇರುವ ಸ್ಥಿತಿಯ ಹಾಗೆ ಮುಸ್ಲಿಮರ ಸ್ಥಿತಿಯಾಗಿ ಬಿಟ್ಟಿತ್ತು. ಈ ಸ್ಥಿತಿಯಲ್ಲಿ ಉಸಾಮರ ಸೈನ್ಯವನ್ನು ನಮ್ಮಿಂದ ಬೇರ್ಪಡಿಸಬೇಡಿರಿ ಎಂದು ಜನರು ಹಝ್ರತ್ ಅಬೂಬಕರ್(ರ)ರೊಡನೆ ವಿನಂತಿಸಿದರು. ಆದರೆ ಹಝ್ರತ್ ಅಬೂಬಕರ್(ರ) ಹೇಳಿದರು: ಯಾರ ನಿಯಂತ್ರಣದಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಮೇಲೆ ಪ್ರಮಾಣ ಮಾಡಿಕೊಂಡು ಹೇಳುತ್ತೇನೆ: ವನ್ಯಮೃಗಗಳು ನನ್ನನು ಎತ್ತಿಕೊಂಡು ಹೋಗುವುದಾಗಿ ನನಗೆ ಗೊತ್ತಿದ್ದರು ಕೂಡ ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಉಸಾಮರ ಸೈನ್ಯವನ್ನು ಖಂಡಿತ ಕಳುಹಿಸುವೆನು. ಹಝ್ರತ್ ಪೈಗಂಬರ್(ಸ) ಜಾರಿಗೊಳಿಸಿದ ತೀರ್ಮಾನವನ್ನು ನನಗೆ ರದ್ದುಪಡಿಸಲು ಸಾಧ್ಯವಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಲ್ಲಾಹನು ಹಝ್ರತ್ ಅಬೂಬಕರ್(ರ)ರ ಮುಖಾಂತರ ನಮ್ಮ ಮೇಲೆ ಔದಾರ್ಯ ತೋರಿರದಿದ್ದರೆ ನಾವು ನಾಶವಾಗುವ ಸಾಧ್ಯತೆಯಿತ್ತು ಮತ್ತು ನಾವು ಝಕಾತಿನ ವಸೂಲಿಗಾಗಿ ಯುದ್ಧ ಮಾಡುವೆವು ಹಾಗೂ ಮರಣ ಬರುವ ತನಕ ನಾವು ಅಲ್ಲಾಹನ ಆರಾಧನೆ ಮಾಡುತ್ತಿರುವೆವು ಎಂಬ ವಿಷಯದ ಮೇಲೆ ಹಝ್ರತ್ ಅಬೂಬಕರ್(ರ) ನಮ್ಮನ್ನು ಒಟ್ಟುಗೂಡಿಸಿದ್ದರು ಎಂದು ಅಬ್ದುಲ್ಲಾಹ್ ಬಿನ್ ಮಸ್‌ಊದ್ ವರದಿ ಮಾಡಿರುವರು. (ಸಿರ್ರುಲ್ ಖಿಲಾಫ, ಉರ್ದು ಅನುವಾದ, ಪುಟ-188-189, ಅಡಿಟಿಪ್ಪಣಿ)

ಈಗ ನಡೆಯುತ್ತಿರುವ ವಿಷಯದ ಬಗ್ಗೆ ಕೆಲವು ತಪ್ಪುಧಾರಣೆಯೂ ಉಂಟಾಗಬಹುದು. ಇಸ್ಲಾಮಿನಲ್ಲಿ ಧರ್ಮತ್ಯಾಗದ ಶಿಕ್ಷೆ ಮರಣದಂಡನೆಯೇ ಎಂಬ ಪ್ರಶ್ನೆ ಕೂಡ ಏಳಬಹುದು. ಇದರ ಕುರಿತು ಸಂಕ್ಷೇಪವಾಗಿ ಹೇಳುತ್ತೇನೆ.

ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಬಹುತೇಕ ಅರೇಬಿಯರ ಧರ್ಮತ್ಯಾಗ ಮತ್ತು ಝಕಾತ್ ನೀಡುವುದರಿಂದ ನಿರಾಕರಣೆಯ ನಂತರ ಹಝ್ರತ್ ಅಬೂಬಕರ್(ರ) ಅವರೆಲ್ಲರೊಂದಿಗೆ ಯುದ್ಧ ಮಾಡಿದರು. ಇಂತಹ ಎಲ್ಲ ವ್ಯಕ್ತಿಗಳನ್ನು ಧರ್ಮತ್ಯಾಗಿಗಳು ಎಂದು ಚರಿತ್ರೆಯ ಪುಸ್ತಕಗಳಲ್ಲಿ ಕರೆಯಲಾಗಿದೆ. ಆದ್ದರಿಂದಲೇ ಧರ್ಮತ್ಯಾಗಿಗಳಿಗೆ ಮರಣದಂಡನೆ ವಿಧಿಸಬೇಕು ಮತ್ತು ಆದ್ದರಿಂದಲೇ ಹಝ್ರತ್ ಅಬೂಬಕರ್(ರ) ಎಲ್ಲ ಧರ್ಮತ್ಯಾಗಿಗಳ ವಿರುದ್ಧ ಜಿಹಾದ್ ಮಾಡಿದ್ದರು ಹಾಗೂ ಪುನಃ ಇಸ್ಲಾಂ ಧರ್ಮ ಸ್ವೀಕಾರ ಮಾಡದವರನ್ನು ವಧಿಸಿದರು ಎಂಬ ತಪ್ಪುಧಾರಣೆ ಚರಿತ್ರೆಗಾರರಲ್ಲಿ ಮತ್ತು ಪಂಡಿತರಲ್ಲಿ ಉಂಟಾಗಿದೆ. ಹೀಗೆ ಹಝ್ರತ್ ಅಬೂಬಕರ್(ರ)ರನ್ನು ಖತಮುನ್ನುಬುವ್ವತ್ ವಿಶ್ವಾಸದ ಸಂರಕ್ಷಕ ಮತ್ತು ಅದರ ಹೀರೋ ರೂಪದಲ್ಲಿ ಚರಿತ್ರೆಗಾರರು ಮುಂದಿರಿಸಿರುವರು. ಆದರೆ ಸತ್ಯವೇನೆಂದರೆ, ಖಿಲಾಫತ್ ರಾಶಿದ ಆ ಕಾಲದಲ್ಲಿ ಖತಮುನ್ನುಬುವ್ವತ್ ವಿಶ್ವಾಸದ ಈ ರೀತಿಯ ಸಂರಕ್ಷಣೆಯ ಯೋಚನೆ ಮತ್ತು ದೃಷ್ಟಿಕೋನ ಇದ್ದೇ ಇರಲಿಲ್ಲ. ಮಾತ್ರವಲ್ಲ ಖತಮುನ್ನುಬುವ್ವತಿಗೆ ಯಾವುದಾದರೂ ಅಪಾಯವಿದ್ದ ಕಾರಣದಿಂದ ಸುಳ್ಳುವಾದಿಗಳನ್ನು ವಧಿಸಲಾಗಿರಲಿಲ್ಲ. ಅದೇ ರೀತಿಯಲ್ಲಿ ಧರ್ಮತ್ಯಾಗಿಗಳಿಗೆ ಮರಣದಂಡನೆ ಶಿಕ್ಷೆಯಿದ್ದ ಕಾರಣದಿಂದ ಅವರನ್ನು ವಧಿಸಲಾಗಿರಲಿಲ್ಲ. ಅವರ ವಿರುದ್ಧ ಏಕೆ ಯುದ್ಧ ಮಾಡಲಾಗಿತ್ತು ಎಂಬುದರ ವಿವರಣೆ ನಾನು ಮುಂದೆ ಹೋಗಿ ವಿವರಿಸುವೆನು. ಆದರೆ ಅದಕ್ಕಿಂತ ಮುಂಚಿತವಾಗಿ ಧರ್ಮತ್ಯಾಗಿಗಳಿಗೆ ಪವಿತ್ರ ಖುರ್‌ಆನ್ ಅಥವಾ ಹಝ್ರತ್ ಪೈಗಂಬರ್(ಸ)

ಮರಣದಂಡನೆ ಅಥವಾ ಯಾವುದಾದರೂ ಶಿಕ್ಷೆ ನಿಶ್ಚಯಿಸಿದೆಯೇ ಎಂಬುದನ್ನು ನೋಡುವುದು ಆವಶ್ಯಕ.

ಇಸ್ಲಾಮಿಕ ಪಾರಿಭಾಷಿಕದಲ್ಲಿ ಮುರ್ತದ್ ಎಂಬುದಾಗಿ ಇಸ್ಲಾಮಿನಿಂದ ಮುಖ ತಿರುಗಿಸುವವನನ್ನು ಮತ್ತು ಇಸ್ಲಾಂ ಸ್ವೀಕಾರ ಮಾಡಿದ ನಂತರ ಪುನಃ ಇಸ್ಲಾಮಿನ ವಲಯದಿಂದ ಹೊರಗೆ ಹೋಗುವವನನ್ನು ಕರೆಯಲಾಗುತ್ತದೆ. ನಾವು ಪವಿತ್ರ ಖುರ್‌ಆನನ್ನು ನೋಡುವಾಗ, ಅಲ್ಲಾಹನು ಅನೇಕ ಜಾಗಗಳಲ್ಲಿ ಧರ್ಮತ್ಯಾಗಿಗಳ ಬಗ್ಗೆ ಪ್ರಸ್ತಾಪಿಸಿರುವುದಾಗಿ ಕಾಣಬಹುದಾಗಿದೆ. ಆದರೆ ಧರ್ಮತ್ಯಾಗಿಗಳಿಗೆ ಮರಣದಂಡನೆ ಅಥವಾ ಬೇರೆ ಯಾವುದೇ ಲೌಕಿಕವಾದ ಶಿಕ್ಷೆ ವಿಧಿಸಬೇಕೆಂದು ಪವಿತ್ರ ಖುರ್‌ಆನ್ ಪ್ರಸ್ತಾಪಿಸಿಲ್ಲ. ಈ ಸಂಬಂಧವಾಗಿ ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಮುಂದಿರಿಸುತ್ತೇನೆ. ಮೊದಲ ವಚನ ಹೀಗಿದೆ: **ವಮ್ಯೆಂಯರ್‌ತದಿದ್ ಮುನ್ಕುಮ್ ಅನ್ ದೀನಿಹೀ ಫಯಮುತ್ ವಹುವಾ ಕಾಫಿರುನ್ ಫಉಲಾಇಕ ಹಬಿತತ್ ಅಅ್‌ಮಾಲುಹುಮ್ ಫಿದ್ದುನಿಯಾ ವಲ್ ಆಖಿರ, ವಉಲಾಇಕ ಅಸ್ಹಾಬುನ್ನಾರಿ, ಹುಮ್ ಫೀಹಾ ಖಾಲಿದೂನ್**– ಅಂದರೆ ನಿಮ್ಮ ಪೈಕಿ ಯಾರಾದರೂ ತನ್ನ ಧರ್ಮದಿಂದ ವಿಮುಖರಾಗಿ ಅವಿಶ್ವಾಸಿಯಾಗಿದ್ದುಕೊಂಡು ಮೃತಪಟ್ಟರೆ ಅಂಥವರ ಕರ್ಮಗಳು ಇಹದಲ್ಲೂ ಪರದಲ್ಲೂ ನಿಷ್ಫಲವಾಗುವುವು. ಅವರೇ ನರಕವಾಸಿಗಳು. ಅಲ್ಲಿ ಅವರು ದೀರ್ಘಕಾಲ ನೆಲಸುವರು. (ಸೂರಃ ಬಖರಃ: 218)

ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿರಲಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಅದರ ಶಿಕ್ಷೆ ಮರಣದಂಡನೆಯಾಗಿದ್ದರೆ, ಇಂತಹ ಧರ್ಮತ್ಯಾಗಿಗಳು ಕೊನೆಗೆ ಸತ್ಯನಿಷೇಧದ ಸ್ಥಿತಿಯಲ್ಲಿ ಮೃತಪಡುವರು ಎಂದು ಇಲ್ಲಿ ಹೇಳಲಾಗುತ್ತಿರಲಿಲ್ಲ.

ಮತ್ತೊಂದೆಡೆ ಹೇಳುತ್ತಾನೆ: **ಯಾ ಅಯ್ಯುಹಲ್ಲಝೀನ ಆಮನು ಮ್ಯೆಂಯರ್‌ತದ್ದ ಮಿನ್ಕುಮ್ ಅನ್ ದೀನಿಹೀ ಫಸೌಫ ಯಅ್‌ತಿಯಲ್ಲಾಹು ಬಿಖೌಮಿನ್ ಯುಹಿಬ್ಬುಹುಮ್ ವಯುಹಿಬ್ಬುನಹೂ; ಅಝಿಲ್ಲತಿನ್ ಅಲಲ್‌ಮುಮಿನೀನ ಅಇಝ್ಝತಿನ್ ಅಲಲ್ ಕಾಫಿರೀನ್; ಯುಜಾಹಿದೂನ ಫೀ ಸಬೀಲಿಲ್ಲಾಹಿ ವಲಾ ಯಖಾಫೂನ ಲೌಮತ ಲಆಇಮಿನ್; ಝಾಲಿಕ ಫಝ್ಲುಲ್ಲಾಹಿ ಯುತೀಹಿ ಮ್ಯೆಂಯಶಾ, ವಲ್ಲಾಹು ಸಮೀಉನ್ ಅಲೀಮ್** (ಅಲ್‌ಮಾಇದಃ: 55) ಎಲೈ ವಿಶ್ವಾಸಿಗಳೇ, ನಿಮ್ಮಿಂದ ಯಾರಾದರೂ ತನ್ನ ಧರ್ಮವನ್ನು ತೊರೆದು ಹೊರಗೆ ಹೋದರೆ, ಅಲ್ಲಾಹನು ತಾನು ಪ್ರೀತಿಸುವ ಜನರ ಒಂದು ಕೋಮನ್ನು ಬದಲಿಗೆ ತರುವನು. ಅವರು ಅವನನ್ನೂ ಪ್ರೀತಿಸುವರು. ಅವರು ಸತ್ಯವಿಶ್ವಾಸಿಗಳೊಂದಿಗೆ ವಿನಯಾನ್ವಿತರೂ ಅವಿಶ್ವಾಸಿಗಳ ವಿರುದ್ಧ ದೃಢಚಿತ್ತರೂ ಆಗಿರುವರು. ಅವರು ಅಲ್ಲಾಹನ ಮಾರ್ಗದಲ್ಲಿ ತೀವ್ರ ಪ್ರಯತ್ನ ಮಾಡುವರು. ಯಾವನೇ ಆಕ್ಷೇಪಕನ ಆಕ್ಷೇಪಕ್ಕೂ ಅವರು ಭಯಪಡಲಾರರು. ಇದು ಅಲ್ಲಾಹನ ಅನುಗ್ರಹವಾಗಿದೆ. ತಾನಿಚ್ಛಿಸುವವರಿಗೆ ಅವನು ಅದನ್ನು ನೀಡುತ್ತಾನೆ. ಅಲ್ಲಾಹನು ಅತಿ ಉದಾರಿಯೂ ಎಲ್ಲವನ್ನು ಚೆನ್ನಾಗಿ ತಿಳಿಯುವವನೂ ಆಗಿದ್ದಾನೆ.

ಈ ಜಾಗದಲ್ಲೂ ಮುರ್ತದ್ ಆಗುವವರ ಬಗ್ಗೆ ಪ್ರಸ್ತಾಪಿಸಿ, ಅಂತಹ ಜನರ ಬದಲಾಗಿ ಅಲ್ಲಾಹನು ಬೇರೆ ಸಮುದಾಯಗಳನ್ನು ನೀಡುವನು ಎಂದು ಸತ್ಯವಿಶ್ವಾಸಿಗಳಿಗೆ ಸುವಾರ್ತೆ ನೀಡಿರುವನು. ಆದರೆ ಮುರ್ತದ್‌ಗಳನ್ನು ವಧಿಸಬೇಕೆಂದೋ ಅವರಿಗೆ ಬೇರೆ ಯಾವುದಾದರೂ ಶಿಕ್ಷೆ ಕೊಡಬೇಕೆಂದೋ ಇಲ್ಲಿ ಪ್ರಸ್ತಾಪಿಸಲಾಗಿಲ್ಲ.

ಮತ್ತೊಂದು ವಚನವಿದೆ. ಅದು ಎಲ್ಲ ರೀತಿಯ ಸಂಶಯಗಳನ್ನು ಮತ್ತು ಸವಾಲುಗಳನ್ನು ಕೊನೆಗೊಳಿಸುವಂತಹದ್ದಾಗಿದೆ. ಅದು ಸೂರಃ ನಿಸಾದ ಈ ವಚನವಾಗಿದೆ: **ಇನ್ನಲ್ಲಝೀನ ಆಮನು ಸುಮ್ಮ ಕಫರೂ ಸುಮ್ಮ ಕಫರೂ ಸುಮ್ಮಝ್‌ದಾದು ಕುಫ್‌ರಲ್ಲಮ್ ಯಕುನಿಲ್ಲಾಹು ಲಿಯಗ್‌ಫಿರ ಲಹುಮ್ ವಲಾಲಿಯಹ್‌ದಿಯಹುಮ್ ಸಬೀಲ** (ಅನ್ನಿಸಾಅ: 138) ವಿಶ್ವಾಸವನ್ನು ಹೊಂದಿದ ಬಳಿಕ ಅವಿಶ್ವಾಸವನ್ನು ತಾಳಿ, ಪುನಃ ವಿಶ್ವಾಸಹೊಂದಿ, ಪುನಃ ಅವಿಶ್ವಾಸ ತಾಳಿ, ಅವಿಶ್ವಾಸದಲ್ಲೇ ಇನ್ನಷ್ಟು ಮುಂದುವರಿಯುವವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರ. ಅವರಿಗೆ ಅವನು ಮೋಕ್ಷ ಮಾರ್ಗವನ್ನೂ ತೋರಿಸಿ ಕೊಡಲಾರ.

ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿಲ್ಲವೆಂಬುದನ್ನು ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ ಮತ್ತು ನಮ್ಮ ಸಾಹಿತ್ಯಗಳಲ್ಲಿ ಹೀಗೆಯೇ ವಿವರಿಸಲಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮತುಲ್ಲಾಹ್) ತನ್ನ ತರ್ಜುಮತುಲ್ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾರೆ: ಒಬ್ಬ ವ್ಯಕ್ತಿ ಧರ್ಮತ್ಯಾಗ ಮಾಡಿದ ನಂತರ ವಿಶ್ವಾಸ ಹೊಂದಿದರೆ, ಅನಂತರ ಪುನಃ ಧರ್ಮತ್ಯಾಗ ಮಾಡಿದ ನಂತರ ವಿಶ್ವಾಸ ಹೊಂದಿದರೆ ಅವನ ಬಗ್ಗೆಗಿನ ತೀರ್ಪು ಅಲ್ಲಾಹನಗೆ ಸೇರಿದ್ದಾಗಿದೆ. ಅವನು ಸತ್ಯನಿಷೇಧದ ಸ್ಥಿತಿಯಲ್ಲಿ ಮೃತಪಟ್ಟರೆ ಅವನು ಖಂಡಿತವಾಗಿಯೂ ನರಕವಾಸಿಯಾಗುವನು. ಧರ್ಮತ್ಯಾಗಿಗಳಿಗೆ ಮರಣದಂಡನೆಯ ಶಿಕ್ಷೆಯಿರುತ್ತಿದ್ದರೆ ಒಬ್ಬ ವ್ಯಕ್ತಿ ಪದೇ ಪದೇ ವಿಶ್ವಾಸ ಹೊಂದುವ ಮತ್ತು ಧರ್ಮತ್ಯಾಗ ಮಾಡುವ ಪ್ರಶ್ನೆಯೇ ಬರುತ್ತಿರಲಿಲ್ಲ. (ಖುರ್‌ಆನೆ ಕರೀಮ್ ಉರ್ದು ಅನುವಾದ, ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರ), ಪುಟ–158, ಅಡಿಟಿಪ್ಪಣಿ)

ಇದಲ್ಲದೇ ಪವಿತ್ರ ಖುರ್‌ಆನಿನ ಕೆಲವು ಬೇರೆ ವಚನಗಳಿವೆ. ಅದು ಮೂಲಭೂತವಾಗಿ ಧರ್ಮತ್ಯಾಗಿಗಳನ್ನು ವಧಿಸುವುದನ್ನು ನಿರಾಕರಿಸುವುದಾಗಿದೆ. ಅಲ್ಲಾಹನು ಹೇಳುತ್ತಾನೆ: **ವಖುಲಿಲ್ ಹಖ್ಖು ಮಿರ್‌ರಬ್ಬಿಕುಮ್; ಫಮನ್‌ಶಾಅ ಫಲ್ ಯಕ್‌ಫುರ್, ಇನ್ನಾ ಅಅ್‌ತದ್‌ನ ಲಿಝ್ಝಾಲಿಮೀನನಾರ, ಅಹಾತ ಬಿಹಿಮ್ ಸುರಾದಿಖುಹಾ, ವ ಇಂಯ್ಯಸ್ತಗೀಸು ಯುಗಾಸೂ ಬಿಮಾಇ ಕಲ್‌ಮುಹ್ಲಿ ಯಶ್ವಿಲ್ ವುಜೂದ್; ಬಿಸಶ್ಶರಾಬು, ವಸಾಅತ್ ಮುರ್‌ತಫ** (ಅಲ್‌ಕಹಫ್: 30) ಹೇಳು: 'ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ.' ದುರ್ಜನರಿಗೆ ನಾವು ಖಂಡಿತವಾಗಿಯೂ ನರಕಾಗ್ನಿಯನ್ನು ಸಿದ್ಧಪಡಿಸಿದ್ದೇವೆ. ಮೇಲೇಳುವ ಅದರ ಜ್ವಾಲೆಗಳು ಅವರನ್ನು ಆವರಿಸುವುವು. ಅವರು ಸಹಾಯಕ್ಕಾಗಿ ಮೊರೆಯಿಟ್ಟರೆ, ಕರಗಿಸಿದ ಸೀಸದಂತಿರುವ ನೀರಿನಿಂದ ಅವರಿಗೆ ನೆರವು ನೀಡಲಾಗುವುದು. ಅದು ಮುಖವನ್ನು ಸುಟ್ಟುಬಿಡುವುದು. ಅದೆಷ್ಟು ಭಯಾನಕವಾದ ಪಾನೀಯ! ಅದೆಷ್ಟು ಕೆಟ್ಟ ವಿರಾಮ ಸ್ಥಳ!

ಧರ್ಮದ ವಿಷಯದಲ್ಲಿ ಯಾವುದೇ ರೀತಿಯ ಬಲಪ್ರಯೋಗವನ್ನು ನಿರಾಕರಿಸುತ್ತಾ ಅಲ್ಲಾಹನು ಹೇಳುತ್ತಾನೆ: **ಲಾ ಇಖ್ರಾಹ ಫಿದ್ದೀನ್; ಖದ್ತಬಯ್ಯನರ್‍ರುಶ್‌ದು ಮಿನಲ್‌ಗೈ, ಫಮ್ಯೆಂ ಯಕ್‌ಫುರ್ ಬಿತ್ತಾಗೂತಿ ವ ಯುಮಿವ್ ಬಿಲ್ಲಾಹಿ ಫಖದಿಸ್ತಮ್ಸಕ ಬಿಲ್ ಉರ್‌ವತಿಲ್ ವುಸ್ಕಾ, ಲನ್‌ಫಿಸಾಮಲಹಾ ವಲ್ಲಾಹು ಸಮೀಉನ್ ಅಲೀಮ್** (ಅಲ್‌ಬಕರಃ: 257) ಅರ್ಥ: ಧರ್ಮದಲ್ಲಿ ಯಾವುದೇ ರೀತಿಯ ಬಲಪ್ರಯೋಗವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಸುದೃಢವಾದೊಂದು ಕೈಯಾಸರೆಯನ್ನು ಹಿಡಿದಿರುವನು ಎಂದು ತಿಳಿದುಕೊಳ್ಳಲಿ. ಅದು ಎಂದಿಗೂ ಮುರಿದು ಹೋಗುವಂಥದ್ದಲ್ಲ. ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ.

ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ಉದಾಹರಣೆಗೆ ಮುಂದಿರಿಸಲಾಗಿವೆ. ಅದರಲ್ಲಿ ಧರ್ಮದ ಹೆಸರಲ್ಲಿ ಯಾವುದೇ ವಿಧದ ಬಲಪ್ರಯೋಗ ಮತ್ತು ಶಿಕ್ಷೆಯನ್ನು ನಿರಾಕರಿಸಲಾಗಿದೆ. ಧರ್ಮತ್ಯಾಗಿಗಳ ಕುರಿತು ಪ್ರಸ್ತಾಪಿಸಿ ಅವರಿಗೆ ಯಾವುದೇ ರೀತಿಯ ಶಿಕ್ಷೆಯ ಬಗ್ಗೆ ಪ್ರಸ್ತಾಪಿಸದೇ ಇರುವುದರಿಂದ ಗೊತ್ತಾಗುವುದೇನೆಂದರೆ, ಧರ್ಮತ್ಯಾಗಿಗಳಿಗೆ ಇಸ್ಲಾಮಿನ ಶರೀಅತ್ ಯಾವುದೇ ದೈಹಿಕ ಅಥವಾ ಲೌಕಿಕ ಶಿಕ್ಷೆಯನ್ನು ನಿಶ್ಚಯಿಸಿಲ್ಲ ಎಂದಾಗಿದೆ.

ಅದಲ್ಲದೇ ಪವಿತ್ರ ಖುರ್‌ಆನಿನಲ್ಲಿ ಹಲವೆಡೆ ಕಪಟವಿಶ್ವಾಸಿಗಳ ಬಗ್ಗೆಯೂ ಪ್ರಸ್ತಾಪವಿದೆ. ಯಾವನೇ ಕಪಟವಿಶ್ವಾಸಿಗೆ ಯಾವುದೇ ವಿಧದ ಶಿಕ್ಷೆಯ ಬಗ್ಗೆ ಹೇಳಲಾಗಿಲ್ಲ. ಅಲ್ಲದೆಯೂ ಯಾವನೇ ಕಪಟವಿಶ್ವಾಸಿಗೆ ಅವನ ಕಪಟವಿಶ್ವಾಸದ ಕಾರಣದಿಂದ ಶಿಕ್ಷೆ ವಿಧಿಸಲಾಗಿಲ್ಲ ಎಂಬುದಕ್ಕೆ ಇಸ್ಲಾಮಿನ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಕಪಟವಿಶ್ವಾಸಿಗಳ ಬಗ್ಗೆ ಪ್ರಸ್ತಾಪಿಸುತ್ತಾ ಪವಿತ್ರ ಖುರ್‌ಆನ್ ಹೇಳುತ್ತದೆ: **ಖುಲ್ ಅನ್‌ಫಿಖೂ ತೌಅನ್ ಔ ಕರ್‌ಹಂಲ್ಲೈಂಯುತಖಬ್ಬಲ ಮಿನ್ಕುಮ್, ಇನ್ನಕುಮ್ ಕುನ್ತುಮ್ ಖೌಮನ್ ಫಾಸಿಖೀನ್. ವಮಾ ಮನಹುಮ್ ಅನ್‌ತುಖ್ಬಲ ಮಿನ್ಹುಮ್ ನಫಖಾತುಹುಮ್ ಇಲ್ಲಾ ಅನ್ನಹುಮ್ ಕಫರೂ ಬಿಲ್ಲಾಹಿ ವ ಬಿ ರಸೂಲಿಹೀ ವಲಾ ಯಅ್‌ತೂನಸ್ಸಲಾತ ಇಲ್ಲಾ ವಹುಮ್ ಕುಸಾಲಾ ವಲಾ ಯುನ್‌ಫಿಖೂನ ಇಲ್ಲಾ ವಹುಮ್ ಕಾರಿಹೂನ್**– ಅರ್ಥ– ಹೇಳು: 'ನೀವು ಸಂತೋಷದಿಂದಾಗಲಿ, ಅಸಂತೋಷದಿಂದಾಗಲಿ (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡಿದರೂ ಅದು ಸ್ವೀಕೃತವಾಗಲಾರದು. ಖಂಡಿತವಾಗಿಯೂ ನೀವು ಅವಿಧೇಯ ಜನರಾಗಿದ್ದೀರಿ. ಅಲ್ಲಾಹನಲ್ಲೂ ಅವನ ಸಂದೇಶವಾಹಕನಲ್ಲೂ ಅವರು ವಿಶ್ವಾಸವಿಡುವುದಿಲ್ಲ; ಆಲಸಿಗರಾಗಿ ಹೊರತು ಅವರು ನಮಾಝಿಗೆ ಬರುವುದಿಲ್ಲ; ಅಸಂತೋಷದಿಂದ ಹೊರತು ಅವರು (ಅಲ್ಲಾಹನ ಮಾರ್ಗದಲ್ಲಿ) ಖರ್ಚು ಮಾಡುವುದಿಲ್ಲ– ಎಂಬೀ ವಿಚಾರಗಳಲ್ಲದೆ ಬೇರೇನೂ ಅವರಿಂದ ಅವರ ದೇಣಿಗೆ ಸ್ವೀಕೃತವಾಗಲು ತಡೆಯಾಗಿರುವುದಿಲ್ಲ. (ಸೂರಃ ತೌಬಃ: 53, 54)

ಈ ವಚನದಲ್ಲಿ ಕಪಟವಿಶ್ವಾಸಿಗಳನ್ನು ಆಜ್ಞಾಲಂಘಕರು ಎಂದು ಹೇಳಲಾಗಿದೆ. ಅಲ್ಲಾಹನು ಮತ್ತು ಅವನ ಪ್ರವಾದಿಯನ್ನು ನಿಷೇಧಿಸುವವರು ಎಂದೂ ಹೇಳಲಾಗಿದೆ. ಅಲ್ಲದೇ ಅವರ ಸತ್ಯನಿಷೇಧದ ಕಾಠಿಣ್ಯ ಈ ವಚನದಲ್ಲಿ ಹೀಗೆಯೂ ಹೇಳಲಾಗಿದೆ. **ಯಹ್‌ಲಿಫೂನ ಬಿಲ್ಲಾಹಿ ಮಾ ಖಾಲು, ವಲಖದ್ ಖಾಲೂ ಕಲಿಮತಲ್ ಕುಫ್ರಿ ವ ಕಫರೂ ಬದ**

**ಇಸ್ಲಾಮಿಹಿಮ್ ವಹಮ್ಮೂ ಬಿಮಾ ಲಮ್ ಯನಾಲು; ವಮಾ ನಖಮೂ ಇಲ್ಲಾ ಅನ್ ಅಘ್‌ನಾಹುಮುಲ್ಲಾಹು ವ ರಸೂಲುಹು ಮಿನ್ ಫಝ್ಲಿಹೀ, ಫಿಂಯ್ಯತೂಬು ಯಕು ಖೈರಲ್ಲಹುಮ್, ವ ಇಂಯ್ಯತವಲ್ಲೌ ಯುಅಝ್ಝಿಬ್‌ಹುಮುಲ್ಲಾಹು ಅಝಾಬನ್ ಅಲೀಮ; ಫಿದ್ದುನ್‌ಯ ವಲ್‌ಆಖಿರತಿ, ವಮಾಲಹುಮ್ ಫಿಲ್ ಅರ್ಝಿ ಮಿಂವ್ವಲೀಯ್ಯುವ್ವಲಾ ನಸೀರ** (ಅತ್ತವಬ: 74) ತಾವು ಅಹಿತಕರವಾದ ಏನನ್ನೂ ಹೇಳಲಿಲ್ಲವೆಂದು ಅಲ್ಲಾಹನ ಆಣೆ ಹಾಕಿ ಅವರು ಹೇಳುತ್ತಾರೆ. ಆದರೆ ದಿಟವಾಗಿಯೂ ಅವರು ಧಿಕ್ಕಾರದ ಮಾತು ಆಡಿದ್ದಾರೆ. ಅವರು ಇಸ್ಲಾಂ ಧರ್ಮ ಸ್ವೀಕರಿಸಿದ ಬಳಿಕ ಅವಿಶ್ವಾಸವನ್ನು ತಳೆದರು. ತಮಗೆ ಸಾಧಿಸಲು ಅಸಾಧ್ಯವಾದುದನ್ನು ಅವರು ಬಯಸಿದರು. ಅಲ್ಲಾಹ್ ಮತ್ತು ಅವನ ಸಂದೇಶವಾಹಕ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರನ್ನು ಸಂಪನ್ನರನ್ನಾಗಿ ಮಾಡಿದುದರಿಂದಲೇ ಅವರು ದ್ವೇಷಭಾವನೆ ಹೊಂದಿದರು. ಆದ್ದರಿಂದ ಅವರು ಪಶ್ಚಾತ್ತಾಪಪಟ್ಟರೆ ಅದು ಅವರಿಗೆ ಉತ್ತಮ. ಅವರು ಮುಖ ತಿರುಗಿಸಿ ಹೋದರೆ ಅಲ್ಲಾಹನು ಅವರಿಗೆ ಇಹದಲ್ಲೂ ಪರದಲ್ಲೂ ಯಾತನಾಮಯವಾದ ಶಿಕ್ಷೆ ನೀಡುವನು. ಭೂಮಿಯಲ್ಲಿ ಅವರಿಗೆ ಮಿತ್ರನಾಗಿ ಅಥವಾ ಸಹಾಯಕನಾಗಿ ಯಾರೂ ಇರಲಾರ.

ಅದೇ ರೀತಿಯಲ್ಲಿ ಸೂರ ತೌಬದಲ್ಲಿ ಹೀಗೆ ಹೇಳಲಾಗಿದೆ: **ಲಾತಅ್‌ತಝಿರೂ ಖದ್ ಕಫರ್‌ತುಮ್ ಬಅ್‌ದ ಈಮಾನಿಕುಮ್** ನೀವು ನೆಪವನ್ನೇನೂ ಹೇಳಬೇಡಿರಿ. **ಲಾತಅ್‌ತಝಿರೂ ಖದ್ ಕಫರ್‌ತುಮ್ ಬಅ್‌ದ ಈಮಾನಿಕುಮ್** ನಿಜವಾಗಿಯೂ ನೀವು ವಿಶ್ವಾಸಗೊಂಡ ನಂತರ ಅವಿಶ್ವಾಸಿಗಳಾಗಿರುತ್ತೀರಿ.

ಅದೇ ರೀತಿಯಲ್ಲಿ ಕಪಟವಿಶ್ವಾಸಿಗಳ ಕುರಿತು ಪೂರ್ತಿ ಸೂರತ್ ಸೂರಃ ಮುನಾಫಿಖೀನ್ ಅವತೀರ್ಣವಾಯಿತು. ಅದರಲ್ಲಿ ಹೀಗೆ ಹೇಳಲಾಗಿದೆ: **ಇತ್ತಖಝೂ ಈಮಾನುಹುಮ್ ಜುನ್ನತನ್ ಫಸದ್ದೂ ಅನ್ ಸಬೀಲಿಲ್ಲಾಹಿ, ಇನ್ನಹುಮ್ ಸಾಅಮಾ ಕಾನೂ ಯಅ್‌ಮಲೂನ್; ಝಾಲಿಕ ಬಿಅನ್ನಹುಮ್ ಆಮನೂ ಸುಮ್ಮ ಕಫರು ಫತುಬಿಅ ಅಲಾ ಖುಲೂಬಿಹಿಮ್ ಫಹುಮ್ ಲಾ ಯಫ್‌ಖಹೂನ್**. (ಅಲ್‌ಮುನಾಫಿಖೂನ್:3–4) ಅವರು ತಮ್ಮ ಪ್ರಮಾಣಗಳನ್ನು ಒಂದು ಗುರಾಣಿಯನ್ನಾಗಿ ಮಾಡಿಕೊಂಡಿರುವರು. ಹಾಗೆ ಅವರು ಜನರನ್ನು ಅಲ್ಲಾಹನ ಮಾರ್ಗದಿಂದ ತಡೆಯುತ್ತಾರೆ. ನಿಶ್ಚಯವಾಗಿಯೂ ಅವರ ಕೃತ್ಯಗಳು ಬಲು ಕೆಟ್ಟದ್ದಾಗಿವೆ. ಅದು, ಅವರು ವಿಶ್ವಾಸ ಹೊಂದಿ ಅನಂತರ ಅವಿಶ್ವಾಸ ಹೊಂದಿದ ಕಾರಣದಿಂದಾಗಿದೆ. ಆದ್ದರಿಂದ ಅವರ ಹೃದಯಗಳಿಗೆ ಮುದ್ರೆ ಹಾಕಲಾಗಿದೆ. ತತ್ಫಲವಾಗಿ ಅವರು ಮನವರಿಕೆ ಮಾಡುವುದಿಲ್ಲ.

ಇಲ್ಲೂ ಜನರು ವಿಶ್ವಾಸ ಕೈಗೊಂಡ ನಂತರ ಅವಿಶ್ವಾಸ ಮಾಡಿಕೊಂಡದ್ದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಆದರೆ ಯಾವುದೇ ರೀತಿಯ ಶಿಕ್ಷೆಯನ್ನು ನಿಶ್ಚಯಿಸಲಾಗಿಲ್ಲ ಮತ್ತು ಯಾವುದೇ ಶಿಕ್ಷೆಯನ್ನು ನೀಡಲಾಗಿಲ್ಲ.

ಒಟ್ಟಿನಲ್ಲಿ, ಅದೇ ರೀತಿಯಲ್ಲಿ ವಿಶ್ವಾಸ ಕೈಗೊಂಡ ನಂತರ ಬಹಿರಂಗವಾಗಿಯೇ ಅವಿಶ್ವಾಸ ಕೈಗೊಂಡವರ ಕುರಿತು ಅನೇಕ ವಚನಗಳಲ್ಲಿ ಪ್ರಸ್ತಾಪವಿದೆ. ಅವರನ್ನು ಫಾಸಿಕ್, ಕಾಫಿರ್ ಮತ್ತು ಮುರ್ತದ್ ಎಂದು ಕರೆಯಲಾಗಿದೆ. ಆದರೆ ಅವರಿಗೆ ಮರಣದಂಡನೆಯಂತಹ ಯಾವುದೇ ಶಿಕ್ಷೆಯನ್ನು ನಿಶ್ಚಯಿಸಲಾಗಿಲ್ಲ.

ಹಝ್ರ‌ತ್ ಪೈಗಂಬರ್(ಸ) ಧರ್ಮತ್ಯಾಗಿಗಳ ಕುರಿತು ಏನು ಹೇಳುತ್ತಾರೆ ಎಂದು ನೋಡುವ. ಈಗ ಪವಿತ್ರ ಖುರ್‌ಆನಿನ ನಂತರ ಪವಿತ್ರ ಖುರ್‌ಆನನ್ನೇ ತನ್ನ ಸ್ವಭಾವ ವೈಶಿಷ್ಟ್ಯವನ್ನಾಗಿ ಮಾಡಿದ ಅನುಗ್ರಹೀತ ವ್ಯಕ್ತಿ ಮತ್ತು ಯಾರ ಮೇಲೆ ಪವಿತ್ರ ಖುರ್‌ಆನ್ ಅವತೀರ್ಣವಾಯಿತೋ ಆ ವ್ಯಕ್ತಿಯಾದ ಹಝ್ರ‌ತ್ ಪೈಗಂಬರ್(ಸ) ಧರ್ಮತ್ಯಾಗಿಗಳಿಗೆ ಸಂಬಂಧಿಸಿ ಹೇಳಿರುವರು.

ಸಹೀಹ್ ಬುಖಾರಿಯಲ್ಲಿ ಹಝ್ರ‌ತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ)ರಿಂದ ಹೀಗೆ ವರದಿಯಾಗಿದೆ: ಒಬ್ಬ ಗ್ರಾಮವಾಸಿ ಹಝ್ರ‌ತ್ ಪೈಗಂಬರ್(ಸ)ರ ಬಳಿಗೆ ಬಂದರು ಮತ್ತು ಇಸ್ಲಾಂ ಸ್ವೀಕಾರ ಮಾಡುತ್ತಾ ಹಝ್ರ‌ತ್ ಪೈಗಂಬರ್(ಸ)ರ ಕೈಯಲ್ಲಿ ಬೈಅತ್ ಮಾಡಿದರು. ಮರುದಿನ ಅವನಿಗೆ ಮದೀನದಲ್ಲಿ ಜ್ವರಬಂತು. ಅನಂತರ ಆ ಮರಳುಗಾಡಿನ ಅರೇಬಿಯನು ಮೂರು ಬಾರಿ ಹಝ್ರ‌ತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದನು: ನನ್ನ ಬೈಅತ್ತನ್ನು ನನಗೆ ಮರಳಿ ಕೊಡಿರಿ. ಹಝ್ರ‌ತ್ ಪೈಗಂಬರ್(ಸ) ಮೂರು ಬಾರಿಯೂ ನಿರಾಕರಿಸಿದರು. ಅನಂತರ ಆ ಗ್ರಾಮವಾಸಿ ಮದೀನದಿಂದ ಹೊರಟು ಹೋದನು. ಇದರ ಮೇಲೆ ಪ್ರವಾದಿ(ಸ) ಅವರು ಮದೀನವು ಕೊಳೆಯನ್ನು ತೊಡೆದುಹಾಕುವ ಮತ್ತು ಮೂಲ ಶುದ್ಧವಾದ ವಸ್ತುವನ್ನು ಶುದ್ಧೀಕರಿಸುವ ಕುಲುಮೆಯಂತಿದೆ ಎಂದು ಹೇಳಿದರು. (ಸಹೀಹ್ ಅಲ್–ಬುಖಾರಿ, ಕಿತಾಬ್ ಫಝಾಎಲುಲ್–ಮದೀನ, ಅಧ್ಯಾಯ: ಅಲ್–ಮದೀನಾ ತನ್ಫಿ ಅಲ್–ಖಬಾಸ್, ಹದೀಸ್ 1883)

ಹಝ್ರತ್ ಮೌಲಾನಾ ಶೇರ್ ಅಲಿ ಸಾಹಿಬ್ ಅವರು ಈ ಹದೀಸ್ ಅನ್ನು ತಮ್ಮ "ಖತ್ಲೆ ಮುರ್ತದ್ ಔರ್ ಇಸ್ಲಾಮ್" ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ (ಇದು ಅವರ ಪುಸ್ತಕಗಳಲ್ಲಿ ಒಂದಾಗಿದೆ. ಈ ಪುಸ್ತಕವನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಲಾಗಿದೆ) ಮತ್ತು ಅವರು ಬರೆಯುತ್ತಾರೆ ಆ ವ್ಯಕ್ತಿಯು ಆಗಾಗ್ಗೆ ಪ್ರವಾದಿ(ಸ)ರವರ ಬಳಿ ಬರುವುದು ಸೂಚಿಸುವುದೇನೆಂದರೆ ಧರ್ಮತ್ಯಾಗಿಗೆ ಮರಣದಂಡನೆ ವಿಧಿಸಲಾಗಿಲ್ಲ ಇಲ್ಲದಿದ್ದರೆ ಆ ವ್ಯಕ್ತಿಯು ಎಂದಿಗೂ ಪ್ರವಾದಿ(ಸ) ಬಳಿಗೆ ಬರುತ್ತಿರಲಿಲ್ಲ ಆದರೆ ಅಘೋಷಿತವಾಗಿ ನುಸುಳಲು ಪ್ರಯತ್ನಿಸುತ್ತಿದ್ದನು, ಅವನು ಧರ್ಮತ್ಯಾಗ ಮಾಡಲು ಬಯಸುತ್ತಿದ್ದಾನೆ ಎಂದು ಯಾರಿಗೂ ತೋರಿಸುತ್ತಿರಲಿಲ್ಲ. ನಂತರ ಅವರು ಧರ್ಮಭ್ರಷ್ಟತೆಯನ್ನು ತಡೆಗಟ್ಟಲು ಇಸ್ಲಾಮಿನ ಕಾನೂನಿನಲ್ಲಿ ಧರ್ಮತ್ಯಾಗಕ್ಕೆ ಶಿಕ್ಷೆಯನ್ನು ಸೂಚಿಸಲಾಗಿದೆ ಮತ್ತು ಜನರನ್ನು ಇಸ್ಲಾಂನಲ್ಲಿ ಬದುಕಲು ಒತ್ತಾಯಿಸುವುದು ಅದರ ಉದ್ದೇಶವಾಗಿದೆ ಎಂದು ನಮಗೆ ಹೇಳಲಾಗಿದೆ ಎಂದು ಬರೆಯುತ್ತಾರೆ. ಇದು ನಿಜವೇ ಆಗಿದ್ದರೆ ಪ್ರವಾದಿ(ಸ) ಮತ್ತೆ ಮತ್ತೆ ತನ್ನ ಬಳಿಗೆ ಬರುತ್ತಿದ್ದ ವ್ಯಕ್ತಿಯನ್ನು ಏಕೆ ಎಚ್ಚರಿಸಲಿಲ್ಲ ಮತ್ತು ಇಸ್ಲಾಂ ಧರ್ಮದಲ್ಲಿ ಧರ್ಮಭ್ರಷ್ಟತೆಯ ಶಿಕ್ಷೆಯನ್ನು ವಧಿಸುವುದು ಎಂದು ನೆನಪಿಸಿಕೊಳ್ಳಿ ಎಂದು ಏಕೆ ಹೇಳಲಿಲ್ಲ. ನೀನು ಧರ್ಮತ್ಯಾಗಗೊಳಿಸಿದರೆ, ನೀನು ಕೊಲ್ಲಲ್ಪಡುತ್ತೀಯ, ಮತ್ತು ಅವನು ಧರ್ಮತ್ಯಾಗಗೊಳಿಸುವ ಉದ್ದೇಶವನ್ನು ಪದೇ ಪದೇ ವ್ಯಕ್ತಪಡಿಸಿದಾಗ, ಮತ್ತು ಅವನು ಧರ್ಮತ್ಯಾಗ ಮಾಡಿ ಇಲ್ಲಿಂದ ಹೊರಟುಹೋಗಬಹುದು ಎಂದು ಭಯವಿರುವಾಗ ಅವನ ಮೇಲೆ ಕಾವಲುಗಾರನನ್ನು ಏಕೆ ನೇಮಿಸಲಿಲ್ಲ, ಆದ್ದರಿಂದ ಅವನು ಧರ್ಮತ್ಯಾಗಿಯಾಗಲು ಪ್ರಾರಂಭಿಸಿದರೆ ಅವನಿಗೆ ಹಿಡಿದು ಅವನ ಮೇಲೆ ಷರಿಯಾ ಮಿತಿಯನ್ನು ವಿಧಿಸಬಹುದಾಗಿತ್ತು. ನಿನ್ನ ಜೀವನಕ್ಕೆ ಒಳಿತಾಗಬೇಕಾದರೆ ಧರ್ಮತ್ಯಾಗದ ಬಗ್ಗೆ ಯೋಚಿಸಬೇಡ ಎಂದು ಸಹಾಬರವರು ಅವನಿಗೆ ಏಕೆ ಹೇಳಲಿಲ್ಲ, ಏಕೆಂದರೆ ಈ ನಗರದಲ್ಲಿ ಯಾರು ಇಸ್ಲಾಂಗೆ ಮತಾಂತರಗೊಂಡರೂ ನಂತರ ಧರ್ಮಭ್ರಷ್ಟರನ್ನು ತಕ್ಷಣವೇ ಕೊಲ್ಲಲಾಗುವುದು. ಈ ಗ್ರಾಮವಾಸಿಯು ಪದೇ ಪದೇ ಧರ್ಮತ್ಯಾಗವನ್ನು ವ್ಯಕ್ತಪಡಿಸುವುದು ಮತ್ತು ಅವನು ಪದೇ ಪದೇ ಪ್ರವಾದಿ(ಸ)ರವರ ಬಳಿಗೆ ಹೋಗುವುದು ಮತ್ತು ಧರ್ಮತ್ಯಾಗಿಯ ಪರಿಣಾಮದ ಬಗ್ಗೆ ಪ್ರವಾದಿ(ಸ) ಅವನಿಗೆ ಎಚ್ಚರಿಕೆ ನೀಡದಿರುವುದು ಮತ್ತು ಸಹಾಬರವರನ್ನು ಆತನನ್ನು ಕೊಲ್ಲಲು ಆದೇಶ ನೀಡದಿರುವುದು ಮತ್ತು ಕೊನೇಗೆ ಅವನು ಯಾವುದೇ ಆಕ್ರಮಣವಿಲ್ಲದೆ ಮದೀನಾದಿಂದ ನಿರ್ಗಮಿಸಿದ್ದು, ಈ ಎಲ್ಲಾ ಅಂಶಗಳು ಸೂಚಿಸುವುದೇನೆಂದರೆ ಇಸ್ಲಾಂನಲ್ಲಿ ಧರ್ಮತ್ಯಾಗಿಗೆ ಯಾವುದೇ ಷರಿಯಾ ಮಿತಿ ಇರಲಿಲ್ಲ. ತದನಂತರ ಆ ಧರ್ಮತ್ಯಾಗಿಯು ಮದೀನದಿಂದ ಹೊರಟಿದಾಗ ಪ್ರವಾದಿಯವರು(ಸ) ಅವನ ನಿರ್ಗಮನದ ಬಗ್ಗೆ ಒಂದು ರೀತಿಯ ಸಂತೋಷವನ್ನು ವ್ಯಕ್ತಪಡಿಸಿದರು ಮತ್ತು ಮದೀನಾವು ಕೊಳಕುಗಳನ್ನು ಶುದ್ಧ ಸತ್ವದಿಂದ ಬೇರ್ಪಡಿಸುವ ಕುಲುಮೆಯಂತಿದೆ ಎಂದು ಹೇಳಿದರು. ಅದೇ ರೀತಿ ಬಲವಂತವಾಗಿ ಇಸ್ಲಾಂಗೆ ಮತಾಂತರಗೊಳ್ಳಬೇಕು ಮತ್ತು ಜನರನ್ನು ಬಲವಂತವಾಗಿ ಧರ್ಮತ್ಯಾಗದಿಂದ ತಡೆಯುವುದು ಸಹ ಸೂಚಿಸುವುದೇನೆಂದರೆ ಪ್ರವಾದಿ(ಸ) ಈ ಸಿದ್ಧಾಂತದ ವಿರುದ್ಧವಾಗಿದ್ದರು. ಬದಲಿಗೆ ಒಬ್ಬ ಅಶುದ್ಧ ವ್ಯಕ್ತಿ ಮುಸ್ಲಿಂ ಸಮುದಾಯದಿಂದ ಬೇರ್ಪಟ್ಟಿದ್ದರೆ ಪ್ರವಾದಿ(ಸ)ರವರು ಅವನೊಂದಿಗೆ ಅತೃಪ್ತರಾಗುತ್ತಿರಲಿಲ್ಲ ಮತ್ತು ಅವನ ವಿರುದ್ಧ ಬಲವಂತವಾಗಿ ಇಸ್ಲಾಂನಲ್ಲಿ ಇರಿಸಬೇಕು ಎಂದು ಪ್ರಯತ್ನಿಸುತ್ತಿರಲಿಲ್ಲ ಆದರೆ ಅಂತಹ ವ್ಯಕ್ತಿಯ ನಿರ್ಗಮನವು ಖಸ್‌ಕಮ್ ಜಹಾನ್ ಕಮ್ (ಕಸಬುಟ್ಟಿ ಸ್ವಚ್ಛಗೊಳಿಸಿದಹಾಗೆ) ಎಂದು ತೋರುತ್ತದೆ. ಒಬ್ಬ ವ್ಯಕ್ತಿಯು ಒಮ್ಮೆ ಇಸ್ಲಾಮಿಗೆ ಪ್ರವೇಶಿಸಿದ ನಂತರ ಅವನು ಇಸ್ಲಾಂನಲ್ಲಿ ಇರಲು ಸಾಧ್ಯವಿರುವ ಎಲ್ಲ ವಿಧಾನಗಳಿಂದ ಬಲವಂತವಾಗಿ ಇಸ್ಲಾಂನಲ್ಲಿ ಉಳಿಯಬೇಕು ಎಂಬ ತತ್ವವನ್ನು ನೀವು(ಸ) ಹೊಂದಿದ್ದರೆ ಮತ್ತು ಅವನು ಯಾವುದೇ ರೀತಿಯಲ್ಲಿ ನಂಬದಿದ್ದರೆ ನಂತರ ಅವನನ್ನು ಕೊಲ್ಲಬೇಕು ಇದರಿಂದ ಅವನ ಮಾದರಿಯು ಇತರರಿಗೆ ಪಾಠವಾಗುತ್ತದೆ. ಈ ಗ್ರಾಮವಾಸಿಯ ನಿರ್ಗಮನದ ಬಗ್ಗೆ ಕೋಪಗೊಂಡಿರಬೇಕು ಮತ್ತು ನೀವು ಅವನನ್ನು ಏಕೆ ಹೋಗಲು ಬಿಟ್ಟಿದ್ದೀರಿ ಎಂದು ತಮ್ಮ ಸಹಾಬರವರನ್ನು ಗದರಿಸಿರಬೇಕಾಗಿತ್ತು. ನೀವು ಅವನನ್ನು ಏಕೆ ಹಿಡಿದು ಕೊಲ್ಲುವ ಬೆದರಿಕೆ ಹಾಕಲಿಲ್ಲ ಮತ್ತು ದುಷ್ಟನಿಗೆ ಮರಣದಂಡನೆ ವಿಧಿಸಲು ಅವನು ಎಲ್ಲಿದ್ದರೂ ಓಡಿಹೋಗಿ ಹಿಡಿಯಲು ಪ್ರವಾದಿ (ಸ) ಅವರಿಗೆ ಆದೇಶ ನೀಡಬೇಕಾಗಿತ್ತು ಆದರೆ ಅವರು ಹೀಗೆ ಹೇಳಲಿಲ್ಲ, ಆದರೆ ಬೇರೆ ರೀತಿಯಲ್ಲಿ ಹೇಳುವುದಾದರೆ ಅವರು ಬಿಟ್ಟದ್ದು ಒಳ್ಳೆಯದು ಎಂದು ಹೇಳಿದರು. ಆತನು ಮುಸ್ಲಿಮರ

ನಡುವೆ ಉಳಿಯಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವನನ್ನು ತನ್ನ ಕೈಯಿಂದ ನಮ್ಮಿಂದ ಬೇರ್ಪಡಿಸಿದನು. ಈ ಗ್ರಾಮವಾಸಿಯ ಉದಾಹರಣೆಯು ಧರ್ಮತ್ಯಾಗಿಗಳಿಗೆ ಯಾವುದೇ ಷರಿಯಾ ಶಿಕ್ಷೆ ಇರಲಿಲ್ಲ ಮತ್ತು ಪ್ರತಿಯೊಬ್ಬ ಧರ್ಮತ್ಯಾಗಿಯನ್ನು ಅವನ ಧರ್ಮತ್ಯಾಗಿಯ ಕಾರಣದಿಂದ ಕೊಲ್ಲುವ ಯಾವುದೇ ಅಭ್ಯಾಸವು ಮುಸ್ಲಿಮರಲ್ಲಿ ಸಂಪೂರ್ಣವಾಗಿ ಇರಲಿಲ್ಲ ಎಂಬುದಕ್ಕೆ ಒಂದು ನಿರ್ದಿಷ್ಟ ಮತ್ತು ಖಚಿತವಾದ ಪುರಾವೆಯಾಗಿದೆ.

(ಮೌಲ್ವಿ ಶೇರ್ ಅಲಿ ಸಾಹಿಬ್ ಅವರಿಂದ ಖತ್ಲ್ ಎ ಮುರ್ತದ್ ಔರ್ ಇಸ್ಲಾಮ್, ಪುಟಗಳು 109–111, 1925)

ಧರ್ಮತ್ಯಾಗಿಯರಿಗೆ ಶರೀಅತ್ ಮಿತಿಯಿಲ್ಲ ಎಂಬುದಕ್ಕೆ ಎರಡನೇ ಪುರಾವೆಯೆಂದರೆ ಪ್ರವಾದಿ(ಸ) ಹುದೈಬಿಯಾದಲ್ಲಿ ಮಕ್ಕಾದ ಬಹುದೇವತಾವಾದಿಗಳೊಂದಿಗೆ ಸಂಧಾನ ಮಾಡಿಕೊಂಡ ಪರಿಸ್ಥಿತಿಗಳು. ಪ್ರವಾದಿ(ಸ) ಹುದೈಬಿಯಾ ದಿನದಂದು ಬಹುದೇವತಾವಾದಿಗಳೊಂದಿಗೆ ಮೂರು ವಿಷಯಗಳ ಮೇಲೆ ಸಂಧಾನವನ್ನು ಮಾಡಿಕೊಂಡರು ಎಂದು ಬಾರಾ ಇಬ್ನ್ ಅಝಿಬ್(ರ) ಅವರಿಂದ ಹೇಳಲಾದ ಹುದೈಬಿಯಾ ಹದೀಸ್‌ನಲ್ಲಿ ಸಂಧಾನದ ಬಗ್ಗೆ ಬರೆಯಲಾಗಿದೆ. ಬಹುದೇವತಾವಾದಿಗಳಲ್ಲಿ ಒಬ್ಬನಾದರು ಮುಸ್ಲಿಮನಾಗಿ ಪ್ರವಾದಿ(ಸ)ರವರ ಬಳಿಗೆ ಹೋದರೆ, ನೀವು ಅವನನ್ನು ಬಹುದೇವತಾವಾದಿಗಳ ಬಳಿಗೆ ಹಿಂತಿರುಗಿಸುತ್ತೀರಿ ಎಂಬುದು ಮೊದಲ ಷರತ್ತು ಆಗಿತ್ತು. ಎರಡನೆಯ ಷರತ್ತು ಏನೆಂದರೆ ಮುಸ್ಲಿಮರಲ್ಲಿ ಯಾರಾದರೂ ಧರ್ಮಭ್ರಷ್ಟರಾಗಿ ಬಹುದೇವತಾವಾದಿಗಳ ಬಳಿಗೆ ಹೋದರೆ, ಬಹುದೇವತಾವಾದಿಗಳು ಅವನನ್ನು ನಿಮ್ಮ ಬಳಿಗೆ ಹಿಂತಿರುಗಿಸುವುದಿಲ್ಲ. (ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಸಲಾಹ್, ಹದೀಸ್ 2700)

ಈ ಒಪ್ಪಂದದ ಎರಡನೆಯ ಷರತ್ತು ಧರ್ಮತ್ಯಾಗಿಗೆ ಯಾವುದೇ ಷರಿಯಾ ಮಿತಿಯಿಲ್ಲ ಎಂದು ಸ್ಪಷ್ಟವಾಗಿ ತೋರಿಸುತ್ತದೆ ಏಕೆಂದರೆ ಧರ್ಮತ್ಯಾಗಿಯ ಶಿಕ್ಷೆಯನ್ನು ಇಸ್ಲಾಮಿನ ಕಾನೂನಿನಲ್ಲಿ ಅವನನ್ನು ವಧಿಸಲು ಸೂಚಿಸಿದ್ದರೆ, ಪ್ರವಾದಿ(ಸ)ರವರು ಎಂದಿಗೂ ಮುಶ್ರಿಕೀನರ ಮಾತನ್ನು ಒಪ್ಪುತ್ತಿರಲಿಲ್ಲ. ಇದಲ್ಲದೆ, ಪ್ರವಾದಿ(ಸ) ರ ಕಾಲದಲ್ಲಿ ಕೆಲವರು ಇಸ್ಲಾಂ ಧರ್ಮದಿಂದ ಧರ್ಮತ್ಯಾಗಿಯಾದರು ಆದರೆ ಧರ್ಮತ್ಯಾಗಿಯಾಗಿದ್ದರು ಎಂದು ಸ್ಪಷ್ಟಪಡಿಸುವ ಅನೇಕ ಘಟನೆಗಳಿವೆ. ಆದರೆ ಅವರಿಗೆ ಕೇವಲ ಅವರ ಧರ್ಮತ್ಯಾಗದ ಕುರಿತು ಯಾವುದೇ ರೀತಿಯ ಶಿಕ್ಷೆ ನೀಡಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿಷಯವನ್ನು ಪವಿತ್ರ ಖುರ್‌ಆನ್‌ನ ಇನ್ನೊಂದು ಆಯತ್ತಿನಲ್ಲಿ ಈ ಕೆಳಗಿನಂತೆ ಸ್ಪಷ್ಟಪಡಿಸಿದ್ದಾರೆ: **ವಮಾ ಅಲರ್‌ರಸೂಲಿ ಇಲ್ಲಲ್ ಬಲಾಗುಲ್ ಮುಬೀನ್** ಅವರು ಹೇಳುತ್ತಾರೆ ಇದರಲ್ಲಿ ಖಡ್ಗವನ್ನು ತ್ಯಜಿಸಿ ಅತಬ್ಲೀಗ್‌ನಿಂದ ಕಾರ್ಯ ನಿರ್ವಹಿಸಬೇಕು ಇದು ದೀರ್ಘಕಾಲೀನ ತತ್ವವಾಗಿದೆ ಮತ್ತು ಹಝ್ರತ್ ಇಬ್ರಾಹೀಮ್(ರ) ಅದೇ ತತ್ವವನ್ನು ಅಳವಡಿಸಿಕೊಂಡಿದ್ದರು. ಮತ್ತು ನಮ್ಮ ಈ ಸಂದೇಶವಾಹಕನ ಕೆಲಸವು ಸಂದೇಶವನ್ನು ತಿಳಿಸುವುದು ಮಾತ್ರವೇ ಹೊರತು ಕತ್ತಿಯಿಂದ ಮನವೊಲಿಸುವುದು ಅಲ್ಲ ಮತ್ತು ಇದು ಇಡೀ ಖುರ್‌ಆನ್ ಸಾರಾಂಶವಾಗಿದೆ ಎಂದು ಅವರ ಕಾಲದ ಜನರಿಗೆ ಸರ್ವಶಕ್ತನಾದ ಅಲ್ಲಾಹನು ಸೂಚಿಸಿದನು.

ಬಲವಂತದಿಂದ ಮನವೊಲಿಸುವುದು ಧಾರ್ಮಿಕ ಜನರ ಕೆಲಸವಲ್ಲ, ಆದರೆ ಇದುವರೆಗೆ ಜಗತ್ತು ಈ ವಿಷಯವನ್ನು ಅರ್ಥಮಾಡಿಕೊಳ್ಳದಿರುವುದು ವಿಷಾದದ ಸಂಗತಿ ಆದರೆ ಮುಸ್ಲಿಮರಲ್ಲಿಯೂ ಸಹ ಧರ್ಮತ್ಯಾಗಿಗಳನ್ನು ಕೊಲ್ಲಲು ಅನುಮತಿಸಲಾಗಿದೆ ಎಂದು ಪರಿಗಣಿಸಲಾಗಿದೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಮುಂದೆ ಹೇಳುತ್ತಾರೆ: ಸತ್ಯವೋ ಸುಳ್ಳೋ, ನಂಬಿಕೆಯುಳ್ಳವನು ಅದನ್ನು ಒಬ್ಬ ಮುಸಲ್ಮಾನನು ತನ್ನ ಧರ್ಮವನ್ನು ಹೇಗೆ ಸತ್ಯವೆಂದು ಪರಿಗಣಿಸುತ್ತಾನೊ ಅದೇ ರೀತಿ ಅವನು ಸಹ ಪರಿಗಣಿಸುತ್ತಾನೆ. ಕ್ರಿಶ್ಚಿಯನ್ ಧರ್ಮ ಸುಳ್ಳಾದರೆ ಪ್ರಶ್ನೆಯೆಂದರೆ, ಪ್ರಪಂಚದ ಹೆಚ್ಚಿನ ಕ್ರಿಶ್ಚಿಯನ್ನರು ಕ್ರಿಶ್ಚಿಯನ್ ಧರ್ಮದ ಬಗ್ಗೆ ಏನು ಯೋಚಿಸುತ್ತಾರೆ? ಅವರು ಖಂಡಿತವಾಗಿಯೂ ಅದನ್ನು ನಿಜವೆಂದು ನಂಬುತ್ತಾರೆ. ಹಿಂದೂ ಧರ್ಮವು ಸುಳ್ಳು ಧರ್ಮವಾಗಿದೆ ಆದರೆ ಪ್ರಪಂಚದ ಹೆಚ್ಚಿನ ಹಿಂದೂಗಳು ತಮ್ಮ ಧರ್ಮದ ಬಗ್ಗೆ ಏನು ಯೋಚಿಸುತ್ತಾರೆ ಎಂಬುದು ಪ್ರಶ್ನೆ. ಅವರು ಖಂಡಿತವಾಗಿಯೂ ನಿಜವೆಂದು ನಂಬುತ್ತಾರೆ. ಈ ಸಮಯದಲ್ಲಿ ಯಹೂದಿ ಧರ್ಮವು ಖಂಡಿತವಾಗಿಯೂ ನಿಜವಲ್ಲ. ಆದರೆ ಪ್ರಶ್ನೆಯೆಂದರೆ, ಬಹುಪಾಲು ಯಹೂದಿಗಳು ಯಹೂದಿ ಧರ್ಮದ ಬಗ್ಗೆ ಏನು ಯೋಚಿಸುತ್ತಾರೆ? ಅವರು ಖಂಡಿತವಾಗಿಯೂ ನಿಜವೆಂದು ನಂಬುತ್ತಾರೆ. ಹೀಗಿದ್ದಲ್ಲಿ ನನ್ನ ಧರ್ಮ ಸತ್ಯ ಮತ್ತು ಇನ್ನೊಬ್ಬರದ್ದಲ್ಲ ಎಂಬ ಕಾರಣಕ್ಕೆ ಯಾರನ್ನಾದರೂ ಕೊಲ್ಲಲು ಅನುಮತಿ ಇದ್ದರೆ. ಓರ್ವ ಕ್ರಿಶ್ಚಿಯನ್‌ಗೆ ಇತರರನ್ನು ಬಲವಂತವಾಗಿ ಕ್ರಿಶ್ಚಿಯನ್‌ನಾಗಿ ಪರಿವರ್ತಿಸುವ ಅಥವಾ ಕೊಲ್ಲುವ ಅನುಮತಿ ಏಕೆ ಇಲ್ಲ. ಒಬ್ಬ ಹಿಂದೂ ಇತರರನ್ನು ಬಲವಂತವಾಗಿ ಹಿಂದೂ ಧರ್ಮಕ್ಕೆ ಪರಿವರ್ತಿಸುವ ಅಥವಾ ಕೊಲ್ಲುವ ಹಕ್ಕು ಹಿಂದೂವಿಗೆ ಏಕೆ ಇಲ್ಲ? ಚೀನಾದಲ್ಲಿ ಕನ್ಫ್ಯೂಷಿಯನಿಸಂನ ಅನುಯಾಯಿಗಳು ತಮ್ಮ ಧರ್ಮಕ್ಕೆ ಸೇರಲು ಜನರನ್ನು ಒತ್ತಾಯಿಸುವ ಹಕ್ಕನ್ನು ಏಕೆ ಹೊಂದಿಲ್ಲ? ಫಿಲಿಪೈನ್ಸ್‌ನಲ್ಲಿ ಇನ್ನೂ 15–20000 ಮುಸ್ಲಿಮರಿದ್ದಾರೆ ಹಝ್ರತ್ ಮುಸ್ಲಿಹ್ ಮೌಊದ್(ರ) ಇದನ್ನು ವಿವರಿಸುವಾಗ ಆದರೆ ಈಗ ಇನ್ನೂ ಹೆಚ್ಚಿನವುಗಳಿವೆ." ಮುಸ್ಲಿಮರನ್ನು ಕ್ರಿಶ್ಚಿಯನ್ನರಾಗಲು ಒತ್ತಾಯಿಸುವ ಹಕ್ಕು ಕ್ರಿಶ್ಚಿಯನ್ನರಿಗೆ ಏಕೆ ಇಲ್ಲ? ತನ್ನ ದೇಶದಲ್ಲಿ ವಾಸಿಸುವ ಮುಸ್ಲಿಮರನ್ನು ಬಲವಂತವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸುವ ಹಕ್ಕು ಅಮೆರಿಕಕ್ಕೆ ಏಕೆ ಇಲ್ಲ? ಎಲ್ಲರನ್ನೂ ಬಲವಂತವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತಿಸುವ ಅಥವಾ ಬಲವಂತವಾಗಿ ಕಮ್ಯುನಿಸಂಗೆ ಮತಾಂತರಿಸುವ ಹಕ್ಕು ರಷ್ಯಕ್ಕೆ ಏಕೆ ಇಲ್ಲ? ಹೀಗೆ ಮುಸ್ಲಿಮರು ಬಲವಂತವಾಗಿ ಬೇರೆಯವರಿಗೆ ತಮ್ಮ ಧರ್ಮಕ್ಕೆ ಮತಾಂತರಿಸಿದರೆ ಅದೇ ರೀತಿಯ ಹಕ್ಕು ಬೇರೆಯವರಿಗೂ ಇದೆ ಆದರೆ ಇಂತಹ ಹಕ್ಕನ್ನು ಜಾರಿಗೊಳಿಸಿ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯವೇ?

ಈ ಹಕ್ಕನ್ನು ನೀಡುವ ಮೂಲಕ, ಈ ಸಮಸ್ಯೆ ಸರಿ ಎಂದು ನೀವು ನಿಮ್ಮ ಮಗನಿಗೆ ಹೇಳಬಹುದೇ ಅಥವಾ ಈ ಸಮಸ್ಯೆ ಸರಿ ಎಂದು ನೀವು ನಿಮ್ಮ ಹೆಂಡತಿಗೂ ಹೇಳಬಹುದೇ? ಕ್ರಿಶ್ಚಿಯನ್ನರು ಮುಸ್ಲಿಮರನ್ನು ಕ್ರಿಶ್ಚಿಯನ್ ಆಗಲು ಬಲವಂತಪಡಿಸುವ ಹಕ್ಕಿದೆ. ಕ್ರೈಸ್ತರನ್ನು ಬಲವಂತವಾಗಿ ಇಸ್ಲಾಂಗೆ ಮತಾಂತರಿಸುವ ಹಕ್ಕು ಮುಸ್ಲಿಮರಿಗೆ ಇದೆ. ಇರಾನಿಯನ್ನರು ಎಲ್ಲಾ ಹನಫಿಗಳನ್ನು ಬಲವಂತವಾಗಿ ಶಿಯಾಗೆ ಪರಿವರ್ತಿಸುವ ಹಕ್ಕನ್ನು ಹೊಂದಿದ್ದಾರೆ ಮತ್ತು ಹನಫಿಗಳಿಗೆ ಬಲವಂತವಾಗಿ ಸುನ್ನಿಗಳಿಗೆ ಮತಾಂತರಿಸುವ ಹಕ್ಕಿದೆ. ಹೀಗೆ ಈ ಮಾತು ಬುದ್ಧಿಗೆ ವಿರುದ್ಧವಾಗಿದೆ, ಯಾವುದೇ ಮನುಷ್ಯನು ಅದನ್ನು ಒಂದು ನಿಮಿಷವೂ ಒಪ್ಪಿಕೊಳ್ಳುವುದಿಲ್ಲ. ಹಿಂದಿನ ಪ್ರವಾದಿಗಳ ಸಮುದಾಯಗಳು ಅಲ್ಲಾಹನ ಮಾರ್ಗದರ್ಶನವನ್ನು ಸ್ವೀಕರಿಸಲು ನಿರಾಕರಿಸಿದಾಗ, ಅಲ್ಲಾಹನು ಅವರಿಗೆ ಹೇಳಿದನು, **ಅನುಲ್‌ಝಿಮುಕುಮುಹಾ ವ ಅನ್ತುಮ್ ಲಹಾ ಕಾರಿಹೂನ್** (ಹೂದ್:29) ಅಂದರೆ ಹೀಗಿರುವಾಗ ನೀವು ಅದನ್ನು ಇಷ್ಟಪಡದ ಸ್ಥಿತಿಯಲ್ಲಿ ನಿಮ್ಮನ್ನು ಅದಕ್ಕೆ ಬಲವಂತ ಎಳೆದು ತರಲು ನಮಗೆ ಸಾಧ್ಯವೇ? ಆದರೆ ದುರದೃಷ್ಟವಶಾತ್, ಇಂದು ಮುಸ್ಲಿಂ ಜಗತ್ತಿನಲ್ಲಿ ಈ ಸತ್ಯವನ್ನು ನಿರಾಕರಿಸುವ ಜನರಿದ್ದಾರೆ." ತದನಂತರ ನಾವು ನೋಡುತ್ತೇವೆ ಮುಸ್ಲಿಮರು ಹೇಳುತ್ತಾರೆ. "ಜಗತ್ತು ಈ ಸಮಸ್ಯೆಯನ್ನು ಅರ್ಥಮಾಡಿಕೊಂಡರೆ, ಖಂಡಿತವಾಗಿಯೂ ದಬ್ಬಾಳಿಕೆ ಮತ್ತು ಆಕ್ರಮಣಶೀಲತೆ ಧಾರ್ಮಿಕ ಮತ್ತು ರಾಜಕೀಯ ವ್ಯವಹಾರಗಳಲ್ಲಿ ತಡೆಗಟ್ಟುತ್ತದೆ. ಜನರು ತಮ್ಮ ನಂಬಿಕೆಗಳನ್ನು ಜನರ ಮೇಲೆ ಹೇರಬಾರದು ಮತ್ತು ಇತರ ದೇಶಗಳಲ್ಲಿ ತಮ್ಮ ರಾಜಕೀಯ ವ್ಯವಸ್ಥೆಯನ್ನು ಒತ್ತಾಯಿಸಲು ಪ್ರಯತ್ನಿಸಬಾರದು."

(ತಫ್ಸೀರ್ ಕಬೀರ್, ಸಂಪುಟ 7, ಪುಟಗಳು. 606–607)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಇಸ್ಲಾಂ ಖಡ್ಗದ ಬಲದಿಂದ ಹರಡಿದೆ ಎಂದು ನಮ್ಮ ವಿರೋಧಿಗಳು ಎಲ್ಲಿಂದ ಮತ್ತು ಯಾರಿಂದ ಆಲಿಸಿರುವರು ಎಂದು ನನಗೆ ಗೊತ್ತಾಗುತ್ತಿಲ್ಲ. **ಲಾ ಇಕ್ರಾಹ ಫಿದ್ದೀನ್** ಅಂದರೆ ಇಸ್ಲಾಂ ಧರ್ಮದಲ್ಲಿ ಬಲಪ್ರಯೋಗವಿಲ್ಲವೆಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ. ಹೀಗಿರುವಾಗ ಯಾರು ಬಲಪ್ರಯೋಗದ ಆದೇಶ ನೀಡಿರುವರು? ದಬ್ಬಾಳಿಕೆಯ ಯಾವ ಸಾಧನಗಳಿದ್ದವು? ಒತ್ತಾಯದ ಕಾರಣದಿಂದ ಧರ್ಮ ಪರಿವರ್ತನೆಗೊಂಡವರು ಇಂತಹ ಉನ್ನತ ಮಟ್ಟದ ನಿಷ್ಠೆ ಮತ್ತು ವಿಶ್ವಾಸ ಉಳ್ಳವರಾದರೇ? ಸಂಖ್ಯೆಯಲ್ಲಿ ಮುನ್ನೂರರಷ್ಟು ಮಾತ್ರವಿದ್ದ ಅವರು ಪ್ರತಿಫಲೇಚ್ಛೆಯಿಲ್ಲದೆ ಸಾವಿರಗಟ್ಟಲೆ ಶತ್ರುಗಳ ವಿರುದ್ಧ ಹೋರಾಡಿದರು. ಅವರ ಸಂಖ್ಯೆ ಸಾವಿರವಿದ್ದಾಗ ಲಕ್ಷಗಟ್ಟಲೆ ಶತ್ರುಗಳನ್ನು ಅವರು ಗೆದ್ದರು. ಸ್ವಧರ್ಮವನ್ನು ಶತ್ರುಗಳ ಆಕ್ರಮಣದಿಂದ ರಕ್ಷಿಸಲು ಅವರು ಕುರಿಗಳಂತೆ ತಮ್ಮ ಶಿರಗಳನ್ನು ಕೊಯ್ದುಕೊಳ್ಳಲು ಕಾಣಿಸಿಕೊಟ್ಟು ಸ್ವಂತ ರಕ್ತದಿಂದ ಇಸ್ಲಾಮಿನ ಸತ್ಯವನ್ನು ಸಾಕ್ಷೀಕರಿಸಿ ಏಕದೇವ ತತ್ವವನ್ನು ಸರ್ವತ್ರ ಪ್ರಚುರ ಪಡಿಸಲು ಸನ್ನದ್ಧರಾದರು. ದುರಂತಗಳನ್ನು ಸಹಿಸಿಕೊಂಡು ಅವರು ಒಂದು ಕಡೆ ಆಫ್ರಿಕದ ಮರಳಾರಣ್ಯದವರೆಗೆ ಇಸ್ಲಾಂ ಧರ್ಮವನ್ನು ಪ್ರಭೋಧಿಸಿದರು; ಮತ್ತೊಂದು ಕಡೆ ಅವರು ಕಷ್ಟಗಳನ್ನು ಸಹಿಸಿಕೊಂಡು ಚೀನಾ ದೇಶವನ್ನು ಸಹ ತಲುಪಿದರು. ರಣೋತ್ಸಾಹಕರವಾದ ಭಟರಾಗಿ ಅಲ್ಲ; ಕೇವಲ ಇಸ್ಲಾಂ ಧರ್ಮವನ್ನು ಪ್ರಭೋಧಿಸಲು ನಿಸ್ಸಂಗರಾದ ದರವೇಶರಾಗಿ (ಬೈರಾಗಿ, ಫಕೀರ) ಅವರು ಅಲ್ಲಿ ಪ್ರವೇಶಿಸಿದ್ದರು. ಅವರ ಅನುಗ್ರಹೀತ ಪ್ರಬೋಧನೆಯಿಂದ ಆ ದೇಶದಲ್ಲಿ ಕೋಟಿಗಟ್ಟಲೆ ಮುಸ್ಲಿಮರು ಉಂಟಾಗುವಂತೆ ಆಯಿತು. ನಂತರ ಅವರು ಒರಟು ವಸ್ತ್ರಧಾರಿಗಳಾದ ದರ್ವೇಶ್‌ಗಳಾಗಿ ನಮ್ಮ ಭಾರತದಲ್ಲೂ ಬಂದರು. ಅವರ ಉಪದೇಶದ ಫಲವಾಗಿ ಆರ್ಯಾವರ್ತದ ಜನ ಸಂಚಯಗಳಲ್ಲಿ ಅನೇಕರು ಇಸ್ಲಾಂ ಧರ್ಮವನ್ನು ಅವಲಂಬಿಸಿದರು. ಅನಂತರ ಅವರು ಪಶ್ಚಿಮ ದಿಕ್ಕಿನೆಡೆಗೆ ತಿರುಗಿ ಯುರೋಪಿನ ಸೀಮೆಯವರೆಗೆ ಏಕದೇವ ಸಿದ್ಧಾಂತವನ್ನು

ಪ್ರಚಾರಪಡಿಸಿದರು. ಸತ್ಯಪ್ರಿಯರೇ, ನೀವು ಪ್ರಾಮಾಣಿಕವಾಗಿ ಹೇಳಿರಿ. ಇವೆಲ್ಲ ಒತ್ತಾಯದ ಕಾರಣದಿಂದ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ನಾಲಗೆಯಿಂದ ಮಾತ್ರ ವಿಶ್ವಾಸವನ್ನು ತೋರ್ಪಡಿಸಿ ಹೃದಯದಲ್ಲಿ ಅವಿಶ್ವಾಸವನ್ನು ತುಂಬಿರುವ ಕಪಟಿಗಳ ವರ್ತನೆಗಳೇ? ಖಂಡಿತವಾಗಿಯೂ ಅಲ್ಲ. ಯಾರ ಹೃದಯ ಸತ್ಯವಿಶ್ವಾಸದ ದೀಪ್ತಿಯಿಂದ ಪ್ರಕಾಶಿತಗೊಂಡು ಅದರಲ್ಲಿ ಕೇವಲ ಸತ್ಯಸ್ವರೂಪನಾದ ಪರಮಾತ್ಮನು ನೆಲೆಸಿದೆಯೋ ಅಂತಹವರ ಕರ್ಮ ವಿಲಾಸವಾಗಿದೆ. (ಪೈಗಾಮೆ ಸುಲಹ್, ರೂಹಾನಿ ಖಝಾಈನ್, ಸಂಪುಟ-23, ಪುಟ-468-469)

ಪವಿತ್ರ ಖುರ್‌ಆನಿನ ಈ ವಚನಗಳ ಮತ್ತು ನಿರ್ದೇಶನಗಳ ಬೆಳಕಿನಲ್ಲಿ, ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಲ್ಲವೆಂದು ಸಾಬೀತಾಗಿದೆ. ಈಗ ಏಳುವ ಪ್ರಶ್ನೆ, ಧರ್ಮತ್ಯಾಗಕ್ಕಿರುವ ಶಿಕ್ಷೆ ಮರಣದಂಡನೆಯಲ್ಲದಿದ್ದರೆ ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳನ್ನು ವಧಿಸಲು ಏಕೆ ಆದೇಶ ನೀಡಿದರು ಎಂದಾಗಿದೆ.

ಸತ್ಯವೇನೆಂದರೆ, ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಧರ್ಮತ್ಯಾಗ ಮಾಡಿದವರು ಧರ್ಮತ್ಯಾಗಿಗಳು ಮಾತ್ರವಾಗಿರಲಿಲ್ಲ. ಬದಲಾಗಿ ಅವರು ಅಪಾಯಕಾರಿ ಉದ್ದೇಶಗಳನ್ನು ಹೊಂದಿದ್ದ ವಿದ್ರೋಹಿಗಳಾಗಿದ್ದರು. ಅವರು ಮದೀನ ರಾಜ್ಯದ ಮೇಲೆ ದಾಳಿ ನಡೆಸಿ ಮುಸ್ಲಿಮರನ್ನು ಕೊಲ್ಲುವ ಭಯಾನಕವಾದ ಯೋಜನೆಯನ್ನು ಮಾಡಿದ್ದರಲ್ಲದೇ ಅನೇಕ ಪ್ರದೇಶಗಳಲ್ಲಿ ಮುಸ್ಲಿಮರನ್ನು ಹಿಡಿದಿಡಿದು ದಾರುಣವಾಗಿ ಕೊಂದು ಹಾಕಿದ್ದರು. ಆದ ಕಾರಣದಿಂದ ಪ್ರತಿರೋಧಕ ಮತ್ತು ಪ್ರತೀಕಾರ ಕಾರ್ಯಚರಣೆ ಎಂಬ ನೆಲೆಯಲ್ಲಿ ಈ ಕೊಲೆಗಡುಕರೊಂದಿಗೆ ಯುದ್ಧ ಮಾಡಲಾಯಿತು. **ಜಝಾಉ ಸಯ್ಯಿಅತುನ್ ಸಯ್ಯಿಅತುವ್ ಮಿಸ್ಲುಹ** ಕೆಡುಕಿಗಿರುವ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ ಎಂಬ ಪವಿತ್ರ ಖುರ್‌ಆನಿನ ವಚನದ ಪ್ರಕಾರ ಅವರು ಮಾಡಿದ ಅಪರಾಧದಂತಹದ್ದೇ ಶಿಕ್ಷೆ ವಿಧಿಸಿ ಅವರನ್ನೂ ವಧಿಸಲು ಆದೇಶಗಳನ್ನು ಹೊರಡಿಸಲಾಯಿತು. ಇತಿಹಾಸ ಹಾಗೂ ಜೀವನಚರಿತ್ರೆಯ ಗ್ರಂಥಗಳಿಂದ ಕೆಲವು ಉಲ್ಲೇಖಗಳನ್ನು ವಿವರಿಸುತ್ತೇನೆ.

ಧರ್ಮತ್ಯಾಗಿಗಳಲ್ಲಿ ಒಬ್ಬನಾಗಿದ್ದ ಖರೀಜಾ ಬಿನ್ ಹಸನ್ ತನ್ನ ಕೆಲವು ಜನರನ್ನು ಕರೆದುಕೊಂಡು ಮದೀನದ ಕಡೆಗೆ ಸವಾರಿ ಮಾಡಿದನೆಂದು ತಾರೀಖ್ ಖಮೀಸ್‌ನಲ್ಲಿ ಬರೆಯಲಾಗಿದೆ. ಅವನು ಮದೀನದ ಜನರು ಹೋರಾಡಲು ಅಥವಾ ಅವರ ನಿರ್ಲಕ್ಷ್ಯವನ್ನು ಕಂಡು ದಾಳಿ ಮಾಡಲು ಹೊರಡುವ ಮೊದಲು ಅವರನ್ನು ತಡೆಯಲು ಬಯಸಿದ್ದನು. ಆದ್ದರಿಂದ ಅವನು ಹಝ್‌ರತ್ ಅಬೂಬಕರ್(ರ) ಮತ್ತು ಅವರೊಂದಿಗೆ ಮುಸಲ್ಮಾನರ ಮೇಲೆ ದಾಳಿ ಮಾಡಿದನು. (ತಾರೀಖ್ ಖಮೀಸ್, ಸಂಪುಟ-3, ಪುಟ-173, ದಾರುಲ್ ಕುತುಬ್ ಇಲ್‌ಮಿಯ 2009)

ಧರ್ಮಭ್ರಷ್ಟರು ಮದೀನವನ್ನು ಆಕ್ರಮಿಸಿದ್ದು ಮಾತ್ರವಲ್ಲದೆ ಹಝ್‌ರತ್ ಅಬೂಬಕರ್(ರ) ಅವರನ್ನು ಸೋಲಿಸಿದಾಗ ಅವರು ಆ ಸಮುದಾಯಗಳಲ್ಲಿ ವಾಸಿಸುತ್ತಿದ್ದ ಪ್ರಾಮಾಣಿಕ ಮುಸ್ಲಿಮರನ್ನು ಸಹ ಕೊಂದರು, ನಾನು ಹಿಂದಿನ ಧರ್ಮೋಪದೇಶದಲ್ಲಿ ಉಲ್ಲೇಖಿಸಿದ್ದೇನೆ ಮತ್ತು ಅವನು ತನ್ನ ಸಮುದಾಯದ ಧರ್ಮತ್ಯಾಗಿಗಳ ಹೊರತಾಗಿಯೂ ಅವನು ಇಸ್ಲಾಂಗೆ ಬದ್ಧನಾಗಿದ್ದನು.

ಅಲ್ಲಾಮ ಖುತ್ಬಿ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ದಾಳಿಗಾರರಾದ ಗೋತ್ರಗಳನ್ನು ಪರಾಜಿತಗೊಳಿಸಿದಾಗ ಬನೂಧುಬ್‌ಯಾನ್ ಮತ್ತು ಅಬಸ್ ಗೋತ್ರದವರು ಅವರ ನಡುವೆ ನೆಲೆಸಿದ ಮುಸ್ಲಿಮರ ಮೇಲೆ ದಾಳಿ ನಡೆಸಿದರು. ಅವರನ್ನು ಎಲ್ಲ ರೀತಿಯಲ್ಲೂ ಕೊಂದು ಹಾಕಿದರು. ಅವರ ಕೆಲವು ಇತರ ಗೋತ್ರಗಳು ಕೂಡ ಇಸ್ಲಾಮಿನಲ್ಲಿ ನೆಲೆನಿಂತಿದ್ದ ಜನರನ್ನು ಕೊಂದು ಹಾಕಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-256, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಲೆಬನಾನ್ 2012)

ಅಲ್ಲಾಮ ಇಬ್ನೆ ಅಸೀರ್ ಬರೆಯುತ್ತಾರೆ ಅಬ್ಬಾಸ್ ಮತ್ತು ಬನು ಝುಬ್ಯಾನ್ ಗೋತ್ರದವರು ತಮ್ಮ ನಿರಾಯುಧ ಮುಸ್ಲಿಮರನ್ನು ಕೆಟ್ಟದಾಗಿ ಕೊಲ್ಲಲು ಪ್ರಾರಂಭಿಸಿದರು ಮತ್ತು ಇತರ ಗೋತ್ರಗಳು ಅವರನ್ನು ನೋಡಿದಾಗ ಅದೇ ರೀತಿ ಮಾಡಿದರು. ಇದಕ್ಕೆ ಹಝ್‌ರತ್ ಅಬುಬಕರ್(ರ) ಅವರು ಮುಸ್ಲಿಮರನ್ನು ಕೊಂದ ಪ್ರತಿಯೊಂದು ಗೋತ್ರದ ಜನರನ್ನು ಖಂಡಿತವಾಗಿ ಕೊಲ್ಲುವುದಾಗಿ ಪ್ರಮಾಣ ಮಾಡಿದರು. (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ-3, ಭಾಗ-6, ಪುಟ-310, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಮುಂಚೆಯ ಹೇಳಿದ ಹಾಗೆ ಪ್ರವಾದಿ(ಸ)ರ ನಿಧನದ ನಂತರ ಧರ್ಮತ್ಯಾಗಿಳಾದ ಗೋತ್ರಗಳ ಧರ್ಮಭ್ರಷ್ಟತೆಯು ಧಾರ್ಮಿಕ ಭಿನ್ನಾಭಿಪ್ರಾಯಗಳಿಗೆ ಸೀಮಿತವಾಗಿಲ್ಲ ಆದರೆ ಅವರು ಇಸ್ಲಾಮಿನ ಸಾಮ್ರಾಜ್ಯದ ವಿರುದ್ಧ ಬಂಡಾಯವೆದ್ದಿದ್ದರು. ಅವರು ತಮ್ಮ ಕೈಯಲ್ಲಿ ಖಡ್ಗವಿತ್ತಿದ್ದರು. ಮದೀನದ ಮೇಲೆ ದಾಳಿ ಮಾಡಿದರು. ತಮ್ಮ ತಮ್ಮ ಖೌಮಿನ ಮುಸ್ಲಿಮರನ್ನು ಕೊಂದಿದ್ದರು. ಅವರನ್ನು ಅಗ್ನಿಯಲ್ಲಿ ಎಸೆದರು ಮತ್ತು ಅವರನ್ನು ಮುಸಲ್ಲ (ಕೊಂದಿದ ಮೇಲೆ ಅವರ ಮುಖಗಳನ್ನು ಕುರುಪಿ ಬೊಗಡಾಯಿಸಿದರು) ಮಾಡಿದರು. ಹಝ್‌ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಉಲ್ಲೇಖಿಸಿ ತಬರಿಯ ಇತಿಹಾಸದಲ್ಲಿ ಬರೆಯಲಾಗಿದೆ, ಅಸದ್ ಮತ್ತು ಘತ್ಫಾನ್ ಮತ್ತು ಹವಾಜಾನ್ ಮತ್ತು ಸುಲೈಮ್ ಮತ್ತು ತಾಯ್‌ಯನ್ನು ಸೋಲಿಸಿದಾಗ, ಖಾಲಿದ್ ಅವರು ಧರ್ಮಭ್ರಷ್ಟ ಸ್ಥಿತಿಯಲ್ಲಿದ್ದವರನ್ನು ಕರೆತಂದ ಹೊರತು ಅವರಿಂದ ಕ್ಷಮೆಯನ್ನು ಸ್ವೀಕರಿಸಲಿಲ್ಲ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-265, ದಾರುಲ್ ಕುತುಬ್ ಅಲ್-ಇಲ್‌ಮಿಯಾ ಬೈರುತ್ 2012)

ಅರೇಬಿಯಾದ ಈ ಧರ್ಮಭ್ರಷ್ಟ ಗೋತ್ರಗಳು ಹಝ್‌ರತ್ ಅಬುಬಕರ್(ರ) ಮತ್ತು ಮುಸ್ಲಿಮರ ವಿರುದ್ಧ ಹೋರಾಡಲು ಮದೀನಾಕ್ಕೆ ಹೊರಟರು ಎಂದು ಅಲ್ಲಾಮಾ ಇಬ್ನ್ ಖುಲ್ದೂನ್ ಬರೆಯುತ್ತಾರೆ.

(ತಾರೀಖ್ ಇಬ್ನ್ ಖಾಲ್ದುನ್, ಸಂಪುಟ-2, ಪುಟ-436, ಖಬರ್ ಬನಿ ತಮೀಮ್ ವಾ ಸಿಜಾಹ್, ದಾರುಲ್ ಕುತುಬ್ ಅಲ್-ಇಲ್‌ಮಿಯಾ ಬೈರುತ್ 2016)

ತಾರೀಖ್ ಅತ್ತಬರಿಯಲ್ಲಿ ಅಬ್ಬಾಸ್ ಮತ್ತು ಝುಬ್ಯಾನ್ ಮೊದಲ ದಾಳಿ ಮಾಡಿದವರು ಎಂದು ಬರೆಯಲಾಗಿದೆ. ಆದ್ದರಿಂದ, ಹಝ್‌ರತ್ ಅಬುಬಕರ್(ರ) ಅವರು ಹಿಂದಿರುಗುವ ಮೊದಲು ಹಝ್‌ರತ್ ಉಸಾಮಾ(ರ) ಅವರೊಂದಿಗೆ ಹೋರಾಡಬೇಕಾಯಿತು. (ತಾರಿಖ್ ಅಲ್-ತಬರಿ ಇಬ್ನ್ ಜರೀರ್ ಅಲ್-ತಬರಿ, ಸಂಪುಟ-2, ಪುಟ-254)

ಅಲ್ಲಾಮಾ ಇಬ್ನ್ ಖಾಲ್ದುನ್ ಬರೆಯುತ್ತಾರೆ ರಬಿಯಾ ಗೋತ್ರದವರು ಧರ್ಮಭ್ರಷ್ಟರಾದರು ಮತ್ತು ಅವರು ಮುಂಝರ್ ಬಿನ್ ನುಮಾನ್ ಅವರನ್ನು ಬೆಳೆಸಿದರು, ಅವರ ಹೆಸರು ಮಗ್‌ರೂರ್ ಎಂದು ಇಡಲಾಯಿತು. ಅವರು ಅವನನ್ನು ರಾಜನನ್ನಾಗಿ ಮಾಡಿದನು. (ತಾರೀಖ್ ಇಬ್ನೆ ಖುಲ್ದೂನ್, ಸಂಪುಟ-2, ಪುಟ-439-440, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಸಹೀಹ್ ಬುಖಾರಿಯ ವ್ಯಾಖ್ಯಾನಗಾರರಾದ ಅಲ್ಲಾಮ ಐನಿ ಬರೆಯುತ್ತಾರೆ: ಹಝ್ರತ್ ಅಬೂಬಕರ್(ರ) ಝಕಾತ್ ನೀಡುವುದನ್ನು ನಿರಾಕರಿಸಿದವರೊಡನೆ ಯುದ್ಧ ಮಾಡಲು ಕಾರಣವೇನೆಂದರೆ, ಅವರು ಖಡ್ಗದ ಮೂಲಕ ಝಕಾತನ್ನು ತಡೆದಿದ್ದರು ಮತ್ತು ಮುಸ್ಲಿಂ ಸಮುದಾಯದ ವಿರುದ್ಧ ಯುದ್ಧ ಶುರು ಮಾಡಿದ್ದರು.

(ಉಮ್ದತುಲ್ ಖಾರಿ, ಇಸ್ತಿತಾಬತುಲ್ ಮುರ್ತದೀನ್, ಸಂಪುಟ-24, ಪುಟ-122, ದಾರುಲ್ ಕುತುಬ್ ಇಲ್‌ಮಿಯ 2001)

ಪ್ರವಾದಿ(ಸ) ರ ಮರಣದ ನಂತರ ಧರ್ಮಭ್ರಷ್ಟರಿಗೆ ಮತ್ತು ಝಕಾತ್ ಇತ್ಯಾದಿಗಳನ್ನು ನೀಡಲು ನಿರಾಕರಿಸಿದವರಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಪರಿಹರಿಸಿದ ನಂತರ, ಈ ಜನರು ವಾಸ್ತವವಾಗಿ ಬಂಡಾಯಗಾರರು ಎಂದು ಬರೆದರು ಮತ್ತು ಅವರನ್ನು ಧರ್ಮಭ್ರಷ್ಟರು ಎಂದು ಕರೆಯಲಾಯಿತು ಎಂದು ಅಲ್ಲಮ ಶೋಕನಿ ಹೇಳುತ್ತಾರೆ. ಧರ್ಮಭ್ರಷ್ಟ ಗುಂಪುಗಳಿಗೆ ಸೇರಿದರು. (ಅಲ್ಲಾಮ ಮುಹಮ್ಮದ್ ಅಲ್-ಶೋಕಾನಿಗಾಗಿ ನಿಲ್ ಅಲ್-ಅವ್ತಾರ್, ಕಿತಾಬ್ ಅಲ್-ಝಕಾತ್, ಪುಟ-724, ದಾರುಲ್ ಕುತುಬ್ ಅಲ್-ಅರಬಿ ಬೈರುತ್ 2004)

ನಂತರ ಒಬ್ಬ ಬರಹಗಾರನು ಪ್ರವಾದಿ(ಸ) ಅವರ ಮರಣದ ನಂತರ ಅನೇಕ ಅರಬ್ ಮುಖ್ಯಸ್ಥರು ಧರ್ಮಭ್ರಷ್ಟರಾದರು ಮತ್ತು ಪ್ರತಿಯೊಬ್ಬರೂ ತಮ್ಮದೇ ಆದ ಪ್ರದೇಶದಲ್ಲಿ ಸ್ವತಂತ್ರರಾದರು ಎಂದು ಬರೆಯುತ್ತಾರೆ. ಸಂಶೋಧಕರ ಪ್ರಕಾರ, ಧರ್ಮಭ್ರಷ್ಟತೆಯು ಹೆಚ್ಚಾಗಿ ರಾಜಕೀಯವಾಗಿತ್ತು. ಧಾರ್ಮಿಕ ಧರ್ಮಭ್ರಷ್ಟತೆ ಅಪರೂಪವಾಗಿತ್ತು. ಪ್ರವಾದಿಯವರ ಲೌಕಿಕ ಜೀವನದ ಕೊನೆಯ ದಿನಗಳಲ್ಲಿ, ಕೆಲವು ಅರಬ್ ಗೋತ್ರಗಳ ನಾಯಕರು ತಮ್ಮ ಬಂಡಾಯದ ರಾಜಕೀಯ ಚಳುವಳಿಗೆ ಧಾರ್ಮಿಕ ಬಣ್ಣ ನೀಡಲು ಪ್ರವಾದಿತ್ವವನ್ನು ಪ್ರತಿಪಾದಿಸಿದರು.

(ಖಿಲಫಾ ಎ ರಾಶಿದೀನ್, ಹಕೀಮ್ ಮಹಮೂದ್ ಜಾಫರ್, ಪುಟ-58, ಅಕ್ರಂ ಆರ್ಕೆಡ್ ಲಾಹೋರ್‌ನಿಂದ ಪ್ರಕಟಿತ)

ಈ ವಿಷಯ ಮುಂದುವರೆಯುವುದು ಇನ್‌ಶಾ ಅಲ್ಲಾಹ್.

ಈ ಚಾರಿತ್ರಿಕ ಉಲ್ಲೇಖಗಳ ಸಂಕ್ಷೇಪವೇನೆಂದರೆ, ಮುರ್ತದ್ ಆದ ಗೋತ್ರಗಳು ಝಕಾತಿನ ಸಂಪತ್ತುಗಳನ್ನು ತಡೆದಿದ್ದರು. ಎಂದರೆ ಸರ್ಕಾರದ ಟೇಕ್ಸನ್ನು ಬಲವಂತವಾಗಿ ತಡೆದಿದ್ದರು. ಕೆಲವು ಜಾಗದಿಂದ ಝಕಾತಿನ ಸಂಪತ್ತನ್ನು ಲೂಟಿ ಮಾಡಿದ್ದರು. ಸೈನ್ಯವನ್ನು ತಯಾರಿ ಮಾಡಿ ದಾರುಲ್‌ಖಿಲಾಫಾದ ಮೇಲೆ ದಾಳಿ ನಡೆಸಿದ್ದರು. ಧರ್ಮತ್ಯಾಗ ಮಾಡುವುದನ್ನು ನಿರಾಕರಿಸದವರನ್ನು ಶಹೀದ್ ಮಾಡಿದರು. ಕೆಲವರನ್ನು ಜೀವಂತವಾಗಿ ಬೆಂಕಿಗೆ ಹಾಕಿ ಸುಟ್ಟುಹಾಕಿದರು. ಆದ್ದರಿಂದ ಇಂತಹ

ಮುರ್ತದ್‌ಗಳು ಆಯುಧ ಸಹಿತವಾಗಿ ಸರ್ಕಾರದ ವಿರುದ್ಧ ದಂಗೆಯೆದ್ದ ಕಾರಣದಿಂದಲೂ, ಸರ್ಕಾರದ ಸಂಪತ್ತುಗಳನ್ನು ಲೂಟಿ ಮಾಡಿದ, ಮುಸ್ಲಿಮರನ್ನು ವಧಿಸಿದ ಮತ್ತು ಅವರನ್ನು ಜೀವಂತವಾಗಿ ಸುಟ್ಟುಹಾಕಿದ ಕಾರಣದಿಂದಲೂ ಮರಣದಂಡನೆಗೆ ಅರ್ಹರಾಗಿದ್ದರು. ಇದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ: **ಇನ್ನಮಾ ಜಝಾಉಲ್ಲಝೀನ ಯುಹಾರಿಬೂನಲ್ಲಾಹ ವ ರಸೂಲಹು ವ ಯಸ್‌ಔನ ಫಿಲ್ ಅರ್ಝಿ ಫಸಾದನ್ ಅನ್ ಯುಖತ್ತಲು ಔ ಯುಸಲ್ಲಬೂ ಔ ಯುಖತ್ತಅ ಅಯ್‌ದೀಹಿಮ್ ವ ಅರ್‌ಜುಲುಹುಮ್ ಮಿನ್ ಖಿಲಾಫಿನ್ ಔ ಯುನ್‌ಫು ಮಿನಲ್ ಅರ್ಝಿ** (ಅಲ್‌ಮಾಇದಃ: 34) ಅಲ್ಲಾಹನೊಡನೆ ಮತ್ತು ಅವನ ಸಂದೇಶವಾಹಕನೊಡನೆ ಯುದ್ಧ ಮಾಡುವವರಿಗೆ ಹಾಗೂ ರಾಜ್ಯದಲ್ಲೆಲ್ಲ ಗಲಭೆ ಗೊಂದಲಗಳನ್ನು ಹಬ್ಬಿಸಲು ಪ್ರಯತ್ನಿಸುವವರಿಗೆ ಶಿಕ್ಷೆಯೇನೆಂದರೆ, ಅವರನ್ನು ವಧಿಸುವುದು ಅಥವಾ ಶಿಲುಬೆಗೇರಿಸಿ ಕೊಲ್ಲುವುದು ಅಥವಾ ಅವರ ಕೈಕಾಲುಗಳನ್ನು ವಿರುದ್ಧ ದಿಕ್ಕುಗಳಿಂದ ಕಡಿಯುವುದು ಅಥವಾ ಗಡಿಪಾರು ಮಾಡುವುದು ಮಾತ್ರವಾಗಿದೆ. (ಸೂರಃ ಮಾಇದ: 34)

ಈಗ ನಾನು ಕೆಲವು ದಿವಂಗತರ ಬಗ್ಗೆಯೂ ಪ್ರಸ್ತಾಪಿಸುವೆನು. ಜುಮಾ ನಮಾಝಿನ ನಂತರ ಅವರ ಜನಾಝ಼ ಗ಼ಾಇಬ್ ಕೂಡ ನಿರ್ವಹಿಸುವೆನು. ಮೊದಲ ಪ್ರಸ್ತಾಪ ಅಮೇರಿಕದಲ್ಲಿ ನೆಲೆಸಿದ್ದ ನಿವೃತ್ತ ಮುರಬ್ಬಿ ಸನ್ಮಾನ್ಯ ಬಶೀರ್ ಅಹ್ಮದ್ ಶಾದ್ ಸಾಹಿಬ್‌ರದ್ದಾಗಿದೆ. 91ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ಅವರ ತಂದೆಗೆ 1926ರಲ್ಲಿ ಬೈಅತ್ ಮಾಡಲು ಸೌಭಾಗ್ಯ ಲಭಿಸಿತ್ತು. 1945ರಲ್ಲಿ ಅವರು ಹತ್ತನೇ ತರಗತಿ ಪಾಸ್ ಮಾಡಿದ ನಂತರ ಮದ್ರಸಾ ಅಹ್ಮದಿಯಾದಲ್ಲಿ ಪ್ರವೇಶಿಸಿದರು. 1952ರಲ್ಲಿ ಅರಬಿ ಫಾಝಿಲ್‌ನ ಪರೀಕ್ಷೆ ಉತ್ತಮ ಪೊಸಿಶನಿನಲ್ಲಿ ಪಾಸ್ ಮಾಡಿದರು. 1954ರಲ್ಲಿ ಜಾಮಿಅತುಲ್ ಮುಬಶ್ಶಿರೀನ್ ರಬ್ವದಿಂದ ಶಾಹಿದ್ ಡಿಗ್ರಿ ಗಳಿಸಿದ ನಂತರ ಒಂದು ವರ್ಷ ಮೆಡಿಸಿನ್ ಕಲಿತರು. 1956ರಿಂದ 1957ರ ತನಕ ವಕಾಲತ್ ತಬ್‌ಶೀರ್ ರಬ್ವದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1958ರಲ್ಲಿ ಅವರು ಸೀರಲಿಯೋನಿಗೆ ಹೋದರು. ಅಲ್ಲಿ ಮುಬಲ್ಲಿಗ್ ಆಗಿ ಅವರನ್ನು ಕಳಿಸಲಾಯಿತು. ಅಲ್ಲಿ ಬೇರೆ ಬೇರೆ ಜಾಗಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಸಿರಲಿಯೋನನಲ್ಲಿ ಅವರು ಪ್ರೆಸ್ ಕೂಡ ಜಾರಿಗೊಳಿಸಿದರು. ನಂತರ ಅವರು ನೈಜೀರಿಯದಲ್ಲಿ ನಿಶ್ಚಯಿಸಲ್ಪಟ್ಟರು. ಅಲ್ಲೂ ಅವರು ಒಳ್ಳೆಯ ಕೆಲಸ ಮಾಡಿದರು. 1964ರಲ್ಲಿ ಅವರನ್ನು ನೈಜೀರಿಯದಿಂದ ಮೂರು ವರ್ಷಗಳ ನಂತರ ಮರಳಿ ಕರೆಯಲಾಗಿತ್ತು. 1964ರಲ್ಲಿ ಪುನಃ ಅವರನ್ನು ನೈಜೀರಿಯಗೆ ಕಳಿಸಲಾಯಿತು. 1967ರಲ್ಲಿ ಅವರು ಬೆನಿನ್‌ನ ತಬ್ಲೀಗ್ ಪರ್ಯಟಣೆಗೆ ಹೋದರು. ಅಲ್ಲಿ ಅವರು ಅಲ್ಲಿಯ ಲೋಕಲ್ ಜನರಿಗೆ ಉತ್ತಮವಾಗಿ ತಬ್ಲೀಗ್ ಮಾಡಿಕೊಂಡು ಅವರ ಬೈಅತ್‌ಗಳನ್ನು ಪಡೆಯಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಿದನು. 1970ರಲ್ಲಿ ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್) ಆಫ್ರಿಕಕ್ಕೆ ಹೋದಾಗ, ಖ಼ಲೀಫತುಲ್ ಮಸೀಹ್ ಕಾನೂಗೆ ಹೋದಾಗ ಮುರಬ್ಬಿ ಸಾಹಿಬ್‌ರು 100 ನವ ಅಹ್ಮದಿಗಳ ಕೊಡುಗೆಯನ್ನು ಹುಝೂ಼ರರ ಮುಂದೆ ಇರಿಸಿದರು. ಆಗ ಹುಝೂ಼ರ್(ರಹ್) ಸಂತೋಷಗೊಂಡು ದುಆ ಮಾಡಿದರು ಮತ್ತು ತನ್ನ ಮುಂಡಾಸನ್ನು (ಪಗಡಿಯನ್ನು) ಬಶೀರ್ ಶಾದ್ ಸಾಹಿಬ್‌ರಿಗೆ ಕೊಟ್ಟರು. 1970ರಲ್ಲಿ ಅಲ್ಲಿಂದ ಮರಳಿ ಹೋಗುವಾಗ ಅವರಿಗೆ ಉಮ್ರ ಮಾಡುವ ಸೌಭಾಗ್ಯ ಲಭಿಸಿತು. 1983ರಲ್ಲಿ ಅವರು ರಬ್ವದ ಸೆಕ್ರಟರಿ ಮಜ್ಲಿಸ್ ಕಾರ್‌ಪರ್‌ದಾಝ಼್ ಬಹಿಶ್ತಿ ಮಖ್‌ಬರ ಆಗಿ ನಿಶ್ಚಯಿಸಲ್ಪಟ್ಟರು. 1984ರಲ್ಲಿ ಜಮಾಅತಿನ ವಿರುದ್ಧ ಆರ್ಡಿನನ್ಸ್ ಆಗಿ ಹಝ್ರ಼ತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರಿಗೆ ಹಿಜ್ರತ್ ಮಾಡುವಂತೆ ಆದಾಗ, ಹಿಜ್ರತ್ ಮಾಡುವುದಕ್ಕೆ ಮುಂಚಿನ ಜುಮಾ ಖುತ್ಬವನ್ನು ಖ಼ಲೀಫತುಲ್ ಮಸೀಹ್ ರಾಬಿಅ್ ಇರುವಾಗಲೇ ಬಶೀರ್ ಸಾಹಿಬ್‌ರಿಗೆ ನೀಡಲು ಸೌಭಾಗ್ಯ ಲಭಿಸಿತು. ಈ ರೀತಿಯಾಗಿ ಅವರ ಪ್ರಸ್ತಾಪ ಅಹ್ಮದಿಯಾ ಚರಿತ್ರೆಯಲ್ಲೂ ಇದೆ. 1988ರಲ್ಲಿ ದಿವಂಗತರು ತನ್ನ ಸ್ವಂತ ಸ್ಥಿತಿಗತಿಗಳ ಕಾರಣದಿಂದ ಹಝ್ರ಼ತ್ ಖ಼ಲೀಫತುಲ್ ಮಸೀಹ್ ರಾಬಿಅ್‌ರಿಂದ ನಿವೃತ್ತಿಯನ್ನು ಕೇಳಿದರು. ಅದನ್ನು ಅಂಗೀಕರಿಸಲಾಯಿತು. ಅನಂತರ ಅವರು ಅಮೇರಿಕಕ್ಕೆ ಹೋದರು. ಅವರು ತನ್ನ ಪತ್ನಿಯಾದ ಸನ್ಮಾನ್ಯ ನಸ್ರೀನ್ ಉಖ್ತರ್ ಶಾದ್ ಸಾಹಿಬರನ್ನಲ್ಲದೇ ಒಬ್ಬ ಪುತ್ರ ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್‌ನಿಂದ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಪರಿಪೂರ್ಣ ನಿಷ್ಠೆಯಿಂದ ಜಮಾಅತ್ ಮತ್ತು ಖಿ಼ಲಾಫತಿನೊಂದಿಗೆ ಸಂಬಂಧವಿರಿಸಿಕೊಳ್ಳಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ಼ ಸಿಯಾಲ್‌ಕೋಟಿನ ಸನ್ಮಾನ್ಯ ರಾನಾ ಮುಹಮ್ಮದ್ ಸಿದ್ದೀಖ್ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳಿಗೆ ಮುಂಚೆ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** ದಿವಂಗತರ ತಂದೆ 1938ರಲ್ಲಿ ಖಾದಿಯಾನಗೆ ಬಂದು ಬೈಅತ್ ಮಾಡಿದ್ದರು. ದಿವಂಗತರು ಉಪವಾಸ, ನಮಾಝ಼್ ಹಾಗು ತಹಜ್ಜುದ್ ನಿರ್ವಹಿಸುವವರಾಗಿದ್ದರು. ದುಆ ಮಾಡುವವರೂ ಬಹಳ ಧೀರರೂ ನಿರ್ಭಯರೂ ಆಗಿದ್ದರು. ಖಿ಼ಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿಯನ್ನು ಹೊಂದಿದ್ದರು. ಖ಼ಲೀಫತುಲ್ ಮಸೀಹ್‌ರ ಆದೇಶಗಳನ್ನು ಪಾಲಿಸುವವರೂ ತನ್ನ ಎಲ್ಲ ಮಕ್ಕಳೊಡನೆ ಸದಾ ಜಮಾಅತಿನೊಂದಿಗೆ ಮತ್ತು ಖಿ಼ಲಾಫತಿನೊಂದಿಗೆ ಪ್ರೀತಿ ಮತ್ತು ಅನುಸರಣೆಯ ಸಂಬಂಧವಿರಿಸಲು ಉಪದೇಶಿಸುತ್ತಿದ್ದರು. 1974ರಲ್ಲಿ ಮತ್ತು 1984ರಲ್ಲಿ ಜಮಾಅತಿನ ವಿರೋಧದ ಕಾರಣದಿಂದ ಅವರಿಗೆ ಕಠಿಣ ಪರಿಸ್ಥಿತಿ ಉಂಟಾಯಿತು. ಆದರೆ ಅವರು ಬಹಳ ಸ್ಥೈರ್ಯವನ್ನು ಪ್ರಕಟಿಸಿದರು. ದಿವಂಗತರು 6 ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಅವರ ಒಬ್ಬ ಪುತ್ರನಾದ ರಾನಾ ಮುಹಮ್ಮದ್ ಅಕ್ರಂ ಮಹ್ಮೂದ್ ಸಾಹಿಬ್ ನೈಜೀರಿಯದಲ್ಲಿ ಮುಬಲ್ಲಿಗ್ ಆಗಿರುವರು. ಅವರು ಕರ್ಮ ಮೈದಾನದಲ್ಲಿ ಆಗಿರುವ ಕಾರಣದಿಂದ ತಂದೆಯ ಜನಾಝ಼ದಲ್ಲಿ ಭಾಗಿಯಾಗಲು ಅವರಿಗೆ ಸಾಧ್ಯವಾಗಲಿಲ್ಲ. ಇದಕ್ಕಿಂತ ಮುಂಚಿತವಾಗಿ ಅವರ ತಾಯಿಯೂ ನಿಧನರಾಗಿದ್ದರು ಅದರಲ್ಲೂ ಮಗನಾದ ಮುರಬ್ಬಿ ಸಾಹಿಬ್‌ರಿಗೆ ಭಾಗಿಯಾಗಲು ಸಾಧ್ಯವಾಗಿರಲಿಲ್ಲ. ಅಲ್ಲಾಹನು ಮಗನಿಗೆ ಸಹನೆ ಮತ್ತು ಧೈರ್ಯವನ್ನು ದಯಪಾಲಿಸಲಿ ಮತ್ತು ದಿವಂಗತರೊಂದಿಗೆ ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ಇಸ್ಲಾಮಾಬಾದಿನ ಸನ್ಮಾನ್ಯ ಡಾಕ್ಟರ್ ಮಹ್ಮೂದ್ ಅಹ್ಮದ್ ಖಾಜಾ ಸಾಹಿಬ್‌ರದ್ದಾಗಿದೆ. ಕೆಲವು ದಿನಗಳಿಗೆ ಮುಂಚಿತವಾಗಿ ಇವರೂ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.** 78ನೇ ವಯಸ್ಸಿನಲ್ಲಿ ನಿಧನರಾದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತಿನ ಪ್ರವೇಶ ಅವರ ತಂದೆಯಾದ ಖಾಜಾ ಮುಹಮ್ಮದ್ ಶರೀಫ್ ಸಾಹಿಬ್‌ರ ಮೂಲಕ ಉಂಟಾಗಿತ್ತು. ಅವರು ಒಂದು ಕನಸಿನ ಆಧಾರದಲ್ಲಿ ಹಝ್ರ಼ತ್ ಖ಼ಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಬೈಅತ್ ಮಾಡಿದ್ದರು. ಬಹಳ ಉತ್ತಮ ಸ್ವಭಾವಿಯಾಗಿದ್ದರು. ಆದ್ದರಿಂದಲೇ ಅವರ ಕುಟುಂಬದ ಇತರರು ಜಮಾಅತಿನ ವಿರೋಧಿಯಾಗಿದ್ದರೂ ಅಲ್ಲಾಹನು ಇವರಿಗೆ ಮೂರು ಬಾರಿ ಕನಸಿನಲ್ಲಿ ಹಝ್ರ಼ತ್ ಮಸೀಹ್ ಮೌಊದ್(ಅ)ರನ್ನು ಬೈಅತ್ ಮಾಡಲು ಆದೇಶ ನೀಡಿದನು. ಕೊನೆಗೆ ಅವರು ಬೈಅತ್ ಮಾಡಿದರು.

ಡಾಕ್ಟರ್ ಮಹ್ಮೂದ್ ಖಾಜಾ ಸಾಹಿಬ್ ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಿಶಾವರ್‌ನಿಂದ ಪಡೆದರು. 1966ರಲ್ಲಿ ಯೂನಿವರ್ಸಿಟಿ ಆಫ್ ಪಿಶಾವರ್‌ನಿಂದ ಕೆಮಿಸ್ಟ್ರಿಯಲ್ಲಿ ಎಂ.ಎಸ್.ಸಿ.ಯ ಡಿಗ್ರಿ ಪಡೆದರು. 1973ರಲ್ಲಿ ಲಾಟರೂ ಯೂನಿವರ್ಸಿಟಿ ಮೆಲ್ಬರ್ನ್ ಆಸ್ಟ್ರೇಲಿಯದ ಟ್ರೂಬ್‌ನಿಂದ ಪಿ.ಎಚ್.ಡಿ.ಯ ಡಿಗ್ರಿ ಪಡೆದರು. ಪಾಕಿಸ್ತಾನದಲ್ಲೂ ಮತ್ತು ವಿದೇಶದಲ್ಲೂ ವಿವಿಧ ಯೂನಿವರ್ಸಿಟಿಯಲ್ಲಿ ಕಲಿಸುತ್ತಿದ್ದರು. ಘಾನದಲ್ಲಿ ಅವರು ಕೆಪ್‌ಕೋಸ್ ಯೂನಿವರ್ಸಿಟಿಯಲ್ಲಿ ಕಲಿಸುತ್ತಿದ್ದಾಗ ನನಗೆ ಅವರ ಪರಿಚಯವಾಯಿತು. ಅತ್ಯಂತ ಸರಳ ಸ್ವಭಾವಿ, ವಿನಯವಂತ ಮತ್ತು ನಿಸ್ವಾರ್ಥ ವ್ಯಕ್ತಿಯಾಗಿದ್ದರು ಎಂಬುದನ್ನು ನಾನು ನೋಡಿದ್ದೇನೆ. ಬಹಳ ಉತ್ತಮ ರಿಸರ್ಚ್ ಸ್ಕಾಲರ್ ಆಗಿದ್ದರು. ರಿಸರ್ಚ್ ಸ್ಕಾಲರ್ ಎಂಬ ನೆಲೆಯಲ್ಲಿ ಪಾಕಿಸ್ತಾನದಲ್ಲೂ ಮತ್ತು ಹೊರಗೂ ಅವರನ್ನು ಬಹಳವಾಗಿ ಗೌರವಿಸಲಾಗುತ್ತದೆ. ಚೌಧರಿ ಇಕ್ರಾಮುಲ್ಲಾಹ್ ಸಾಹಿಬ್‌ರ ಮಗಳಾದ ಅಮತುಲ್ ಖಯ್ಯೂಂ ಸಾಹಿಬರೊಂದಿಗೆ ಅವರ ವಿವಾಹವಾಗಿತ್ತು. ಅವರಿಗೆ ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯಿರುವರು.

ಡಾಕ್ಟರ್ ಮಹ್ಮೂದ್ ಖಾಜಾ ಸಾಹಿಬ್‌ರಿಗೆ ನುಸ್ರತ್ ಜಹಾನ್ ಸ್ಕೀಮಿನ ಅಧೀನದಲ್ಲಿ 1979ರಿಂದ 1984ರ ತನಕ ಸಿರಲಿಯೋನನಲ್ಲಿ ತನ್ನ ಪತ್ನಿಯೊಂದಿಗೆ ವಖ್ಫ್ ಮಾಡಲು ಕೂಡ ಸೌಭಾಗ್ಯ ಲಭಿಸಿತು. ಅವರ ಮಗನಾದ ಡಾಕ್ಟರ್ ತಾರಿಕ್ ಖಾಜಾ ಹೇಳುತ್ತಾರೆ: ರಮಝಾ಼ನ್ ತಿಂಗಳಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಬಹಳ ಶ್ರದ್ಧೆಯಿಂದಲೂ ಮಗ್ನತೆಯಿಂದಲೂ ಓದುತ್ತಾರೆ. ಅಲ್ಲಾಹನು, ಅವನ ಪ್ರವಾದಿ ಮತ್ತು ಖ಼ಲೀಫರ ನಿರ್ದೇಶನಗಳನ್ನು ಅದೇ ರೀತಿಯಲ್ಲಿ ಮುಂದಿರಿಸಬೇಕು ಎಂಬುದಕ್ಕೆ ಒತ್ತು ನೀಡುತ್ತಿದ್ದರು. ಪದಗಳ ನಿಸ್ಸಾರ ತಪ್ಪಿನಿಂದಲೂ ತಪ್ಪಾದ ಅರ್ಥ ಲಭಿಸುವುದು ಎಂದು ಹೇಳುತ್ತಿದ್ದರು. ಇಸ್ಲಾಮಾಬಾದ್ ಜಿಲ್ಲೆಯ ಅಮಿರ್ ಆಗಿರುವ ಅಬ್ದುಲ್‌ಬಾರಿ ಸಾಹಿಬ್‌ರು ಬರೆಯುತ್ತಾರೆ: ನನಗೂ ಮತ್ತು ಖಾಜಾ ಸಾಹಿಬ್‌ರಿಗೂ ನುಸ್ರತ್ ಜಹಾನ್ ಸ್ಕೀಮಿನ ಅಧೀನದಲ್ಲಿ ಸಿರಲಿಯೋನಿನಲ್ಲಿ ಜೊತೆಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಪಾಕಿಸ್ತಾನಕ್ಕೆ ಮರಳಿ ಬಂದಾಗ ಮೊದಲು ಅವರು ಸರ್ಕಾರದ ವಿಭಾಗದಲ್ಲಿ ನೌಕರಿ ಮಾಡಿದರು. ಅನಂತರ ಇಸ್ಲಾಮಾಬಾದಿಗೆ ಶಿಫ್ಟ್ ಆದರು. ಅಲ್ಲಿ ಸಸ್ಟೇನೇಬಲ್ ಡೆವಲಪ್‌ಮೆಂಟ್ ಪೋಲಿಸಿ ಇನ್ಸ್ಟಿಟ್ಯೂಟ್‌ನಲ್ಲಿ

ಸೇರ್ಪಡೆಯಾದರು. ಅವರು ಈ ಸಂಸ್ಥೆಯಲ್ಲಿ ಬಹಳ ಅಂಗೀಕಾರವನ್ನು ಪಡೆದರು. ಪ್ರಸಿದ್ಧರಾಗಿದ್ದರೂ ಅವರು ಪರಿಪೂರ್ಣ ನಿಷ್ಠೆಯಿಂದ ಕೆಲಸ ಮಾಡಿದರು. ನೀರಾವರಿ ಮತ್ತು ಸೌಂದರ್ಯವರ್ಧಕ ವಸ್ತುಗಳು ಇತ್ಯಾದಿಗಳಲ್ಲಿ ಇರುವ ಅಪಾಯಕರ ಕೆಮಿಕಲನ್ನು ಕೊನೆಗೊಳಿಸುವ ಕೆಲಸವನ್ನು ಮಾಡಿದರು. ಈ ಕೆಲಸದಿಂದ ಅಂತರ್ರಾಷ್ಟ್ರೀಯವಾಗಿ ಬಹಳ ಹೆಸರುವಾಸಿಯಾದರು. ಈ ಸಂಬಂಧವಾಗಿ ಅನೇಕ ಗ್ರಂಥಗಳನ್ನು ಬರೆದರು. ಬಾರಿ ಸಾಹಿಬ್ ಹೇಳುತ್ತಾರೆ: ಯಾವುದೇ ಪುಸ್ತಕವನ್ನು ಬರೆದರೂ ಅದರ ಒಂದು ನಕಲುಪ್ರತಿಯನ್ನು ನನಗೂ ಕಳಿಸುತ್ತಿದ್ದರು. ನನ್ನ ಬಳಿ ಅವರ ಅನೇಕ ಪುಸ್ತಕಗಳು ಇವೆ. ಅತ್ಯಂತ ನಿಷ್ಠಾವಂತ ಅಹ್ಮದಿಯಾಗಿದ್ದರು. ಖಿಲಾಫತಿನೊಂದಿಗೆ ಪ್ರೀತಿಯ ಸಂಬಂಧವನ್ನು ಹೊಂದಿದ್ದರು. ಸದಾ ಖುದ್ದಾಮರ ತರಬೇತಿಗಾಗಿ ಅವರ ದೌರ್ಬಲ್ಯದ ಬಗ್ಗೆ ತಿಳಿಹೇಳುತ್ತಿದ್ದರು.

ಖಾಜಾ ಮಹ್ಮೂದ್ ಸಾಹಿಬ್‌ರ ಕುರಿತು ಪಾಕಿಸ್ತಾನದಿಂದಲ್ಲದೇ ಜರ್ಮನಿ, ಸ್ವೀಡನ್, ಬುರ್ಕಿನಾಫಾಸೋ, ಅಮೇರಿಕ, ಆಧರ್‌ಬಾಇಜಾನ್, ಸ್ವೀಟ್‌ಝರ್‌ಲ್ಯಾಂಡ್, ನೈಜೀರಿಯ, ಈಜಿಪ್ಟ್, ಬಹ್‌ರೈನ್ ಮತ್ತು ಅನೇಕ ದೇಶಗಳ ವಿಜ್ಞಾನಿಗಳು ಮತ್ತು ಸರ್ಕಾರಿ ಮಂತ್ರಾಲಯಗಳ ಪ್ರತಿನಿಧಿಗಳು ಹಾಗು ಯೂನಿವರ್ಸಿಟಿಗಳ ಚಾನ್ಸಲರ್‌ಗಳು, ಪ್ರೊಫೆಸರ್‌ಗಳು, ಸಿವಿಲ್ ಸೊಸೈಟಿಯ ಎನ್.ಜಿ.ಓ.ಗಳ ಅಧ್ಯಕ್ಷರು ಶ್ರದ್ಧಾಂಜಲಿಯ ಸಂದೇಶಗಳನ್ನು ಕಳುಹಿಸಿದ್ದಾರೆ. ಅವರ ಕುರಿತು ಅನೇಕ ಸಂದೇಶಗಳು ಬಂದಿವೆ. ಅವರ ಮಕ್ಕಳು ಅವುಗಳನ್ನು ನನಗೂ ಕಳಿಸಿದ್ದಾರೆ. ಉದಾಹರಣೆಗಾಗಿ ಒಂದೆರಡು ಸಂದೇಶಗಳನ್ನು ಓದಿ ಹೇಳುತ್ತೇನೆ:

ವರ್ಲ್ಡ್ ಅಲೈನ್ಸ್ ಫಾರ್ ಮರ್ಕುರಿ ಡೆನ್‌ಸ್ಟ್ರೀ ವಾಶಿಂಗ್‌ಟನ್ ಡಿ.ಸಿ. ಅಮೇರಿಕದ ಜೀಬ್ರೌನ್ ಅಧ್ಯಕ್ಷರಾದ ಮಿಸ್ಟರ್ ಚಾಲ್ಸ್ ಬರೆಯುತ್ತಾರೆ: ಡಾಕ್ಟರ್ ಖಾಜಾ ಅತ್ಯಂತ ವಿಶಿಷ್ಟ, ಬುದ್ಧಿವಂತ ಮತ್ತು ಅಪರೂಪದ ಸಾಮಾಜಿಕ ಸೇವಕರಾಗಿದ್ದರು. ನವೀನ ವಿಜ್ಞಾನ ಮತ್ತು ವಿಷಕಾರಿಕ ಪದಾರ್ಥಗಳ ಬಗ್ಗೆ ಅವರ ವೈಭವಶಾಲಿ ವೈಜ್ಞಾನಿಕ ಲಿಖಿತಗಳು ಸ್ಕಾಲರ್‌ಶಿಪನ್ನು ಅಭಿವೃದ್ಧಿಗೊಳಿಸಲು ಮತ್ತು ಮೂಲಭೂತ ವಿಭಾಗಗಳ ಕೆಲಸಗಳಿಗೆ ಅಡಿಪಾಯ ಒದಗಿಸಿಕೊಡಲು ಮುಖ್ಯವಾದುದಾಗಿದೆ. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅವರು ಅನೇಕ ವರ್ಷಗಳು ಮಾಡಿದ ಸೇವೆಗಳು ರಾಷ್ಟ್ರಗಳ ನಡುವೆ ಒಪ್ಪಂದವನ್ನು ಕಾರ್ಯಗತಗೊಳಿಸಲು, ಸಿವಿಲ್ ಸೊಸೈಟಿಗಳ ನಡುವೆ ಪರಸ್ಪರ ಹೊಂದಾಣಿಕೆಯನ್ನು ವರ್ಧಿಸಲು ಮತ್ತು ಪಾಕಿಸ್ತಾನದಲ್ಲಿ ವಿಷಕಾರಿಕ ಪದಾರ್ಥಗಳನ್ನು ಕಡಿಮೆಗೊಳಿಸಲು ಸಹಾಯಕವಾಗಿದ್ದುವು. ಅವರಿಗೆ 2019ರಲ್ಲಿ ದಿ ಪೆಸಿಫಿಕ್ ಬೇಸಿನ್ ಕಂಸರ್‌ಟಿಯಮ್ ಫೋರ್ ಎನವೈರ್‌ಮೆಂಟ್ ಎಂಡ್ ಹೆಲ್ತ್ ಚ್ಯಾರ್‌ಮೇನನ ಅವಾರ್ಡ್ ಲಭಿಸಿತ್ತು. ಡಾಕ್ಟರ್ ಮಹ್ಮೂದ್ ಸಾಹಿಬ್‌ರ ಯಶಸ್ಸುಗಳಲ್ಲಿ ಒಂದು ಅವರು ಅಂತರ್ರಾಷ್ಟ್ರೀಯ ವೈದ್ಯಕೀಯ ಸಂಸ್ಥೆಯ ಅಧ್ಯಕ್ಷರಾಗಿದ್ದರು ಎಂಬುದೂ ಇವೆ. ಅವರು ಫಿಝಿಶಿಯನ್ ಆಗದೇ ಇದ್ದರೂ ಅದರ ಅಧ್ಯಕ್ಷರಾದ ಏಕ ವ್ಯಕ್ತಿಯಾಗಿದ್ದರು. ಅವರು ಪಿ.ಎಚ್.ಡಿ ಡಾಕ್ಟರೇಟ್ ಹೊಂದಿದವರಾಗಿದ್ದರು.

ಇದೇ ರೀತಿಯಲ್ಲಿ ಅನೇಕ ವಿಜ್ಞಾನಿಗಳು ಅವರನ್ನು ಪ್ರಶಂಸಿರುವರು. ಅವರಲ್ಲಿ ಜರ್ಮನಿಯ ಮತ್ತು ಸ್ವೀಟ್‌ಝರ್‌ಲ್ಯಾಂಡಿನ ಡಾಕ್ಟರ್ ಕೂಡ ಸೇರಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಸಂಬಂಧಿಕರಿಗೆ ಸಹನೆ ದಯಪಾಲಿಸಲಿ ಮತ್ತು ಒಳಿತುಗಳನ್ನು ಜಾರಿಗೊಳಿಸಲು ಸೌಭಾಗ್ಯ ನೀಡಲಿ. ಆಮೀನ್.

************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವ್ಯಾಖ್ಯಾನದಲ್ಲಿ ಹೇಳುತ್ತಾರೆ.

"ಲಿತುಬೈಯ್ಯಿನ ಲಿನ್ನಾಸಿ ಮಾ ನುಝ್ಝೀಲ ಇಲೈಹಿಮ್' ಲತುಬಯ್ಯಿನದ ಲ (ಲಾಮ್) "ತಅಲೀಲ್" ಸಹ ಆಗಬಹುದಾಗಿದೆ. ಮತ್ತು "ಆಖಿಬತ್" ಸಹ ಲ (ಲಾಮ್) "ತಅಲೀಲ್" ಅರ್ಥ ನಾವು ನಿನ್ನ ಮೇಲೆ ಇತರ ಗ್ರಂಥಗಳಿಗಿಂತ ಉತ್ತಮವಾದ ಗ್ರಂಥವನ್ನು ಇಳಿಸಿದ್ದೇವೆ. ಏಕೆಂದರೆ ನೀನು ಸರ್ವಲೋಕಕ್ಕೆ ಆ ಶಿಕ್ಷಣ ನೀಡುವಂತವನಾಗಿರಬೇಕು ಅಂದರೆ ನಿನ್ನ ಮೇಲೆ ಅವತರಿಸಿದಂತಹ ಶಿಕ್ಷಣ ಎಲ್ಲರಿಗಿಂತ ಉತ್ತಮವಾಗಿರಲು ಕಾರಣವೇನೆಂದೆರ ಅದು ಯಾವುದೇ ಒಂದು ಸಮುದಾಯಕ್ಕೆ ಅಥವಾ ಒಂದು ಕಾಲಕ್ಕೆ ಸೀಮಿತವಲ್ಲ. ಬದಲು ಎಲ್ಲರಿಗಾಗಿದೆ. ಅವರು ಯಾವುದೇ ಸಮುದಾಯಕ್ಕೆ ಸಂಬಂಧಿಸಿದವರಾಗಲಿ ಅಥವಾ ಯಾವ ಕಾಲಘಟ್ಟಕ್ಕೆ ಸಂಭಂದಿಸಿದವರಾಗದೆ ಎಲ್ಲರಿಗಾಗಿಯೂ ಅವತರಿಸಿದವರಾಗಿದ್ದಾರೆ. ಲ (ಲ) "ಆಖಿಬತ್" ನ ತಾತ್ಪರ್ಯ ನಿನ್ನ ಮೇಲೆ ಅಂತಹ ಉತ್ತಮ ಗ್ರಂಥ ಅವತರಿಸಿದ ಮೇಲೆ ಅದನ್ನು ಗೌಪ್ಯವಾಗಿಡಲು ಹೇಗೆ ಸಾಧ್ಯ? ಅದು ಉತ್ತಮವಾದ ಕಾರಣದಿಂದಲೇ ನೀನು ಸರ್ವಲೋಕಕ್ಕೆ ಕರೆ ನೀಡಲು ಸಾಧ್ಯವಾಗಿದೆ. ಅಂತಹ ಗ್ರಂಥ ಯಾರ ಮೇಲೆ ಅವತರಿಸಿದೆಯೋ ಅವರು ಮೌನವಾಗಿರಲು ಹೇಗೆ ಸಾಧ್ಯ?

**ನುಝ್ಝೀಲ ಇಲೈಹಿಮ್** ಎಂದು ಹೇಳಿ ಅವಿಶ್ವಾಸಿಗಳ ಭಾವನೆಗಳಿಗೂ ಪ್ರೇರಣೆ ನೀಡಿದಂತಾಗಿದೆ. ಅಂದರೆ ಆ ಗ್ರಂಥ ನಿನ್ನ ಮೇಲೆ ಅವತರಿಸಿದ್ದು ನಿಜ. ಆದರೆ ಅದರ ಅವತರಣಿಕೆಯ ಉದ್ದೇಶ ಸರ್ವಲೋಕಕ್ಕೆ ಪ್ರಯೋಜನಕಾರಿಯಾಗಿದೆ. ಆದುದರಿಂದ ನಿಜ ಅರ್ಥದಲ್ಲಿ ಅದು ಸರ್ವ ಲೋಕಗಳ ಮೇಲೆ ಅವತರಿಸಿದಂತೆಯೇ ಸರಿ. ಹೀಗಿರುವಾಗ ಜನರು ಏಕೆ ಅಲ್ಲಾಹನ ಈ ಅನುಗ್ರಹಕ್ಕೆ ಒಪ್ಪುತ್ತಿಲ್ಲ.

**ನುಝ್ಝೀಲ ಇಲೈಹಿಮ್** ಮೂಲಕ ಈ ವಿಷಯದ ಮೇಲೂ ಒತ್ತಿ ಹೇಳಲಾಗಿದೆ. ಖುರ್‌ಆನ್ ಅನ್ನು ಲೋಕದಾದ್ಯಂತ ತಲುಪಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಅದರ ಅವತರಣಿಕೆ ಸರ್ವಲೋಕಗಳಿಗಾಗಿವೆ. ಅದು ಸರ್ವಲೋಕಗಳ ಸಂಪತ್ತಾಗಿದೆ. ಆದುದರಿಂದ ಅದನ್ನು ಎಲ್ಲರ ಬಳಿ ತಲುಪಿಸುವುದು ಒಂದು ಮುಖ್ಯವಾದ ಕರ್ತವ್ಯವಾಗಿದೆ. ಅಕಟಾಕಟ! ಮುಸಲ್ಮಾನರು ಈ ತತ್ವ ತಿಳಿದುಕೊಂಡಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು ಮತ್ತು ಇಸ್ಲಾಮಿನ ಈ ಕರ್ತವ್ಯ ಪಾಲಿಸುವುದರಲ್ಲಿ ಆಲಸ್ಯ ವಹಿಸದಿರುತ್ತಿದ್ದರೆ ಇಂದು ಲೋಕದಲ್ಲಿ ಇಸ್ಲಾಮ್ ಹೊರತು ಯಾವ ಧರ್ಮವು ಕಂಡು ಬರುತ್ತಿರಲಿಲ್ಲ. ಏಕೆಂದರೆ ಅದರ ಪವಿತ್ರ ಶಿಕ್ಷಣಗಳ ಮುಂದೆ ಯಾವ ಶಿಕ್ಷಣವು ನಿಲ್ಲಲು ಸಾಧ್ಯವಿಲ್ಲ. ಇಂದು ನಿಸ್ಸಂಶಯವಾಗಿಯೂ ಅದರ ಪ್ರಚಾರಗಳಲ್ಲಿ ತೊಡಕುಗಳಿವೆ ನಿಜ. ಏಕೆಂದರೆ ಲೌಕಿಕ ಮೋಹಗಳು ಇಸ್ಲಾಂ ಧರ್ಮ ಸ್ವೀಕರಿಸಲು ಅಡ್ಡಿಯಾಗಿದೆ. ಆದರೆ ಈ ಸ್ಥಿತಿ ಇಂದು ಸೃಷ್ಟಿಗೊಂಡಿದೆ. ಈ ಹಿಂದೆ ಲೋಕವು ಮುಸಲ್ಮಾನರ ಆಳ್ವಿಕೆಯಲ್ಲಿತ್ತು ಅದರಂತೆ ಅವರ ಧರ್ಮ ಅವರ ಅಧೀನದಲ್ಲಿತ್ತು.

**ಲಿತುಬಯ್ಯಿನ**ದಲ್ಲಿ ಇನ್ನೊಂದು ಸೂಕ್ಷ್ಮವಾದ ಅರ್ಥ ಹೀಗೆ ವಿವರಿಸಲಾಗಿದೆ. ಅದೇನೆಂದರೆ ಕೆಲವು ಗ್ರಂಥಗಳು ಹೇಗಿವೆ ಎಂದರೆ ಅದನ್ನು ಪ್ರಸ್ತುತಪಡಿಸಲು ನಾಚಿಕೆಯಾಗುತ್ತದೆ. ಉದಾಹರಣೆಗೆ ಬೈಬಲ್‌ನ ಕೆಲ ತುಣುಕುಗಳು. ಆದರೆ ಪವಿತ್ರ ಖುರ್‌ಆನ್‌ನಲ್ಲಿರುವ ವಚನಗಳು ಎಷ್ಟೊಂದು ಸಭ್ಯವಾಗಿವೆ ಎಂದರೆ ಅದನ್ನು ಎಲ್ಲಡೆಯೂ ಪ್ರಸ್ತುತಪಡಿಸಬಹುದಾಗಿದೆ. ಒಬ್ಬ ಕ್ರೈಸ್ತನು ಹೇಳುತ್ತಾನೆ. ಖುರ್‌ಆನ್‌ನ ಮಹಾನತೆ ಏನೆಂದರೆ ಅದನ್ನು ಎಲ್ಲ ಸಭೆಗಳಲ್ಲೂ ಪಠಿಸಬಹುದಾಗಿದೆ. ಆದರೆ ನಮ್ಮ ಗ್ರಂಥಗಳು ಎಲ್ಲ ಸಭೆಗಳಲ್ಲಿ ಪಠಿಸುವಂತಿಲ್ಲ.

ಹಝ್ರತ್ ಲೂತ್ ಮತ್ತು ಅವರ ಹುಡುಗಿಯರ ಘಟನೆ, ಬನೀ ಈಸ್ರಾಯಿಲರು ಹೆಣ್ಣು ಮಕ್ಕಳನ್ನು ಕೊಲ್ಲವುದು ದೇವನ ಆಜ್ಞೆಯಾಗಿದೆ ಎನ್ನುವುದು, ಇವು ಎಂತಹ ಘಟನೆಗಳಾಗಿವೆ ಎಂದರೆ ಅವುಗಳನ್ನು ಎಲ್ಲ ಸಭೆಗಳಲ್ಲಿ ಪ್ರಸ್ತುತಪಡಿಸುವುದು ಭಾರವೆನಿಸುತ್ತದೆ. ಆರ್ಯರ ನ್ಯೂಗ್ ಪದ್ಧತಿ (ಶಿಕ್ಷಣ) ಸಹ ಹೇಗಿದೆ ಎಂದರೆ. ಬೇರೆ ಧರ್ಮಗಳವರಿಗೆ ಒಂದೆಡೆ ಇರಲಿ, ಸ್ವಯಂ ಆರ್ಯ ಪತಿಯಾದವನು ತನ್ನ ಪತ್ನಿಯ ಮುಂದೆ ಸಹ ಆ ಶಿಕ್ಷಣ ಓದಿ ಹೇಳಲು ಆಗುವುದಿಲ್ಲ. ಆದರೆ ಪವಿತ್ರ ಖುರ್‌ಆನ್ ಎಂತಹ ವಿಷಯಗಳನ್ನು ಒಳಗೊಂಡಿದೆ ಎಂದರೆ ಮತ್ತು ಎಂತಹ ಪದಗಳನ್ನು ಬಳಸಿದೆ ಎಂದರೆ ಅದನ್ನು ಎಲ್ಲ ಸಮುದಾಯಗಳ ಮುಂದೆ ಮತ್ತು ಎಲ್ಲ ವಯಸ್ಸಿನ ಜನರ ಮುಂದೆ ಓದಿ ತಿಳಿಸಬಹುದಾಗಿದೆ.

"ಲಅಲ್ಲಹುಮ್ ಯತಫಕ್ಕರೂನ್" ಮೂಲಕ ದೇವವಾಣಿಯು ಮಾನವನ ಚಿಂತನಾಶಕ್ತಿಯನ್ನು ಬಲಪಡಿಸುತ್ತದೆ ಎಂದು ತಿಳಿಸಲಾಗಿದೆ. ಸಹಾಬರ ನಡಾವಳಿಕೆಯು ಅದರ ಜೀವಂತ ಉದಾಹರಣೆಯಾಗಿದೆ. ಅವರು ಅನಕ್ಷರಸ್ಥರು ಮತ್ತು ಕಾಲಘಟ್ಟದ ಸ್ಥಿತಿಗತಿಯಿಂದ ಅಜ್ಞಾನಿಗಳಾಗಿದ್ದರು. ಆದರೆ ಪವಿತ್ರ ಖುರ್‌ಆನ್‌ನ ದಿವ್ಯವಾಣಿ ಆಲಿಸಿ ಮತ್ತು ಮನವರಿಕೆ ಮಾಡಿಕೊಂಡು ಲೋಕದ ಪಂಡಿತರು ಮತ್ತು ಗುರುಗಳಾದವರು ಎಂತಹ ಬುದ್ಧಿವಂತಿಕೆ ಅವರಲ್ಲಿ ಉಂಟಾಯಿತೆಂದರೆ ಲೋಕದ ಎಲ್ಲ ವಿದ್ಯೆಗಳಲ್ಲಿಯೂ ಅವರು ಭವಿಷ್ಯಕ್ಕಾಗಿ ಒಂದು ಅತ್ಯುತ್ತಮ ಮಾದರಿಯನ್ನು ಬಿಟ್ಟು ಹೋಗಿದ್ದಾರೆ.

**(ತಫ್ಸೀರ್ ಕಬೀರ್ ಸಂ. 4, ಪುಟ 172 ಮುದ್ರಣ 2010 ಖಾದಿಯಾನ್)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಮತ್ತು ಕೆಲ ಅವಧಿಯಲ್ಲೇ ಅವನು ತೀರಿ ಹೋದನು. ಆದರೆ ಲೇಖರಾಮನು ತುಂಬಾ ಧೈರ್ಯದಿಂದ ಒಂದು ಪತ್ರ ಈ ವಿನೀತನಿಗೆ ಕಳುಹಿಸಿದನು. ನನ್ನ ಬಗ್ಗೆ ಯಾವ ಭವಿಷ್ಯವಾಣಿಯಾದರೂ ಪ್ರಕಟಿಸಿರಿ. ನನ್ನ ಕಡೆಯಿಂದ ನಿಮಗೆ ಅಪ್ಪಣೆ ಇದೆ. ಹಾಗೆ ಈ ಬಗ್ಗೆ ಗಮನಕೊಟ್ಟಾಗ ಅಲ್ಲಾಹನಿಂದ ಈ ದಿವ್ಯವಾಣಿಯಾಯಿತು. (ಆಇನ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–5, ಪುಟ–649)

**"ಇಜ್‌ಲುನ್ ಜಸದಲ್ ಲಹು ಖುವಾರುನ್ ಲಹು ನಸಬುಂ ವ ಅಝಾಬುನ್"**

ಅಂದರೆ ಅದೊಂದು ಕೇವಲ ಜೀವವಿಲ್ಲದ ಗೋಪಾಲವಾಗಿದೆ. ಅದರೊಳಗಿನಿಂದ ಒಂದು ಕಳೆಯಿಲ್ಲದಂತಹ ಸ್ವರ ಬರುತ್ತಿದೆ. ಅವನ ಆ ಅಪಹಾಸ್ಯಗಳ ಮತ್ತು ಅಶ್ಲೀಲ ಭಾಷೆ ಬಳಕೆಯಿಂದಾಗಿ ಅವನಿಗೆ ಶಿಕ್ಷೆ, ದುಃಖ ಮತ್ತು ಘೋರವಾದ ಶಿಕ್ಷೆ ವಿಧಿಸಲ್ಪಟ್ಟಿದೆ. ಅದು ಅವನಿಗೆ ಲಭಿಸಿಯೇ ತೀರುವುದು. ಅದಾದ ನಂತರ ಇಂದು ಅಂದರೆ 20 ಫೆಬ್ರವರಿ 1893 ಸೋಮವಾರ ದಿನವಾಗಿದೆ. ಆ ಶಿಕ್ಷೆಯ ಸಮಯವನ್ನು ತಿಳಿಯಲು ಗಮನಹರಿಸಿದ್ದೆ. ಆಗ ಅಲ್ಲಾಹನು ನನ್ನ ಮುಖಾಂತರ ಪ್ರಕಟಪಡಿಸಿದನು. ಇಂದಿನ ತಾರೀಖಿನಿಂದ ಅಂದರೆ 20 ಫೆಬ್ರವರಿ 1893 ರಿಂದ ಆರು ವರ್ಷಗಳ ಅವಧಿಯವರೆಗೆ ಈ ವ್ಯಕ್ತಿ ನನ್ನ ದುರ್ಭಾಷೆಯ ಫಲವಾಗಿ ಶಿಕ್ಷೆಗೆ ಒಳಗಾಗುವನು. ಅಂದರೆ ಅವನು ಬಳಸಿದ ಅಸಭ್ಯ ಭಾಷೆಯಿಂದ (ಅವನು ರಸೂಲುಲ್ಲಾಹ್(ಸ) ರವರ ಪಕ್ಷದಲ್ಲಿ ಬಳಸಿದ್ದನು) ಭಯಂಕರವಾದ ಶಿಕ್ಷೆಗೆ ಗುರಿಯಾಗುವನು. ಹಾಗೆ ನಾನು ಈ ಭವಿಷ್ಯವಾಣಿಯನ್ನು ಪ್ರಕಟಪಡಿಸಿ ಎಲ್ಲಾ ಮುಸಲ್ಮಾನರಿಗೆ, ಆರ್ಯರಿಗೆ ಮತ್ತು ಕ್ರೈಸ್ತರಿಗೆ ಹಾಗೂ ಇತರ ಪಂಥಗಳ ಮೇಲೆ ಜಾಹೀರುಪಡಿಸುತ್ತೇನೆ. ಇಂದಿನ ತಾರೀಖಿನಿಂದ ಆರು ವರ್ಷಗಳ ಅವಧಿಯಲ್ಲಿ ಅವನ ಮೇಲೆ ಅಸಮಾನ್ಯವಾದ, ಆಶ್ಚರ್ಯಕರವಾದ (ಸಾಧಾರಣ ಕಷ್ಟಗಳ ಮೇಲ್ಪಟ್ಟಿದ್ದು) ತನ್ನೊಳಗೆ ದೈವಿಕ ಭಯ ಒಳಗೊಂಡಿರುವಂತಹ ಒಂದು ಶಿಕ್ಷೆ ವಿಧಿಸಲ್ಪಡದಿದ್ದರೆ ತಿಳಿದುಕೊಳ್ಳಿರಿ ನಾನು ಅಲ್ಲಾಹನ ಕಡೆಯಿಂದ ಬಂದವನಲ್ಲ, ಅವನ ಆತ್ಮದೊಂದಿಗೆ ನನಗೆ ಸಂಬಂಧವಿಲ್ಲ, ಈ ಭವಿಷ್ಯವಾಣಿಯಲ್ಲಿ ನಾನು ಸುಳ್ಳುಗಾರನಾದರೆ ನಾನು ಯಾವುದೇ ರೀತಿಯ ಶಿಕ್ಷೆಗೆ ಗುರಿಪಡಲು ಸಿದ್ಧನಿದ್ದೇನೆ, ನನ್ನ ಕುತ್ತಿಗೆ ಹಗ್ಗ ಬಿಗಿದು ಶಿಲುಬೆಗೇರಲು ತಯಾರಾಗಿದ್ದೇನೆ. ನನ್ನ ಈ ಸ್ವೀಕೃತಿಯ ಹೊರತಾಗಿ ಯಾರಾದರು ಮನುಷ್ಯನು ತನ್ನ ಭವಿಷ್ಯವಾಣಿಯಲ್ಲಿ ಸುಳ್ಳುಗಾರ ಎಂದಾದರೆ ಅದು ಸ್ವಯಂ ಅವನಿಗೆ ಎಲ್ಲ ಅಪಮಾನಗಳಿಗಿಂತಲೂ ಹೆಚ್ಚಾಗಿರುತ್ತದೆ. ಇದಕ್ಕಿಂತ ಹೆಚ್ಚು ಏನು ಬರೆಯಲಿ. (ಆಯಿನಾ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–5, ಪುಟ–649)

**ಇಜ್‌ಲುನ್ ಜಸದುಲ್ ಖುವಾರುನ್ ಲಹು ನಸಬುವ್ವ ಅಝಾಬ್** ರ ವ್ಯಾಖ್ಯಾನ ಮಾಡುತ್ತ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಲೇಖರಾಮನ ಸಾವಿಗಿಂತ ಎಷ್ಟೋ ವರ್ಷ ಮುಂಚೆ ಸ್ಪಷ್ಟವಾಗಿ ನಾವು ಭವಿಷ್ಯವಾಣಿ ಮಾಡಿದ್ದೆವು ಲೇಖರಾಮ, ಗೋಪಾಲ ಸಾಮಿರಿಯ ರೀತಿ ಛಿದ್ರ ಛಿದ್ರನಾಗುವನು, ಅದರಲ್ಲಿ ಸಂಕೇತವಿತ್ತು. ಯಾವ ರೀತಿ ಗೋಪಾಲ ಸಾಯಿರಿ. ಶನಿವಾರ ದಿನ ಛಿದ್ರ ಛಿದ್ರನಾಗಿದ್ದನು. ಅದೇ ಅವಸ್ಥೆ ಲೇಖರಾಮನದ್ದು ಆಗುವುದು. ಅದು ಅವನ ಹತ್ಯೆಯ ಕಡೆ ಬೊಟ್ಟು ಮಾಡಲಾಗಿತ್ತು. ಹಾಗೆ ಲೇಖರಾಮನು ಶನಿವಾರದಂದು ಹತ್ಯೆಯಾದನು. ಆ ದಿನಗಳಲ್ಲಿ ಶನಿವಾರಕ್ಕಿಂತ ಮುಂಚೆ ಜುಮುಅ (ಶುಕ್ರವಾರ) ಮುಸಲ್ಮಾನರ ಹಬ್ಬವಾಗಿತ್ತು. ಅದರಂತೆಯೇ ಗೋಪಾಲ ಸಾಮಿರಿ ಕೂಡ ಶನಿವಾರದಂದೇ ಛಿದ್ರಿಸಲ್ಪಟ್ಟಿದ್ದನು. ಅದು ಯಹೂದ್ಯರ ಹಬ್ಬದ ದಿನವಾಗಿತ್ತು ಗೋಪಾಲ ಸಾಮಿರಿ ಹತ್ಯೆಯಾದ ಮೇಲೆ ಸುಡಲಾಗಿತ್ತು. ಹಾಗೆಯೇ ಲೇಖರಾಮನ ಹತ್ಯೆಯಾದ ನಂತರ ಸುಡಲಾಯಿತು. ಏಕೆಂದರೆ ಹತ್ಯೆಮಾಡಿದವನು ಮೊದಲು ಅವನ ಹೊಟ್ಟೆಯ ಕರುಳುಗಳನ್ನು ಸೀಳಿದನು. ಮತ್ತೆ ಡಾಕ್ಟರನು ಅವನ ಗಾಯಗಳನ್ನು ಇನ್ನಷ್ಟು ತೆರವುಗೊಳಿಸಿದನು. ಅಂತಿಮವಾಗಿ ಅವನನ್ನು ಸುಡಲಾಯಿತು. ಮತ್ತೆ ಗೋಪಾಲ ಸಾಮಿರಿಯ ರೀತಿ ಅವನ ಅಸ್ಥಿಗಳನ್ನು ಸಮುದ್ರಕ್ಕೆ ಎಸೆಯಲಾಯಿತು. ಅಲ್ಲಾಹನು ಅವನನ್ನು ಗೋಪಾಲ ಸಾಮಿರಿಗೆ ಹೋಲಿಕೆ ನೀಡುವ ಉದ್ದೇಶವೇನೆಂದರೆ ಅವನು ಗೋಪಾಲ ರೀತಿ ಕೇವಲ ಜೀವವಿಲ್ಲದ ವಿಗ್ರಹದಂತಿದ್ದನು. ಆ ಕಾಲದ ಆಟಿಕೆಯಂತೆ ಅದನ್ನು ಒತ್ತಿದರೆ ಸ್ವರ ಹೊರ ಬರುವ ರೀತಿ ಈ ಗೋಪಾಲನಿಂದಲೂ ಒಂದು ಸದ್ದು ಬರುತಿತ್ತು. ಹಾಗೆ ಅಲ್ಲಾಹನು ಹೇಳುತ್ತಾನೆ. ಲೇಖರಾಮ ಜೀವವಿಲ್ಲದ ಶವದಂತಿದ್ದರು. ಅವನಲ್ಲಿ ಯಾವ ರೀತಿಯ ಆಧ್ಯಾತ್ಮಿಕ ಜೀವನ ಇರಲಿಲ್ಲ. ಅವನ ಸ್ವರ ಕೇವಲ ಗೋಪಾಲ ಸಾಮಿರಿಯ ರೀತಿಯಾಗಿದ್ದಿತು. ಸತ್ಯ ಪರಿಜ್ಞಾನವಿರಲಿ ಸತ್ಯದ ಅರಿವಾಗಲಿ ಮತ್ತು ಜೀವನಿಂದ ಯಾವ ರೀತಿಯ ಸಂಬಂಧ ಅವನಿಗೆ ಇರಲಿಲ್ಲ ದೇವನ ಪ್ರೇಮ ಸಂಬಂಧದಿಂದ ಅವನು ವಂಚಿತನಾಗಿದ್ದನು. ಇದು ಆರ್ಯರ ದೋಷವಾಗಿತ್ತು. ಆ ಜೀವವಿಲ್ಲದ ಶರೀರವನ್ನು ಅದರಲ್ಲಿ ಆಧ್ಯಾತ್ಮಿಕತೆಯ ಆತ್ಮವೇ ಇರಲಿಲ್ಲ. ಆ ಸ್ಥಾನಕ್ಕೆ ತಂದು ನಿಲ್ಲಿಸಿದರು. ಆ ಸ್ಥಾನದಲ್ಲಿ ಜೀವಂತ ವ್ಯಕ್ತಿಯೊಬ್ಬನನ್ನು ನಿಲ್ಲಿಸಬೇಕಾಗಿತ್ತು. ಆ ಕಾರಣವೇ ಅವನ ಪರಿಣಾಮ ಗೋಪಾಲ ಸಾಮಿರಿಯಂತಾಯಿತು. (ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–22, ಪುಟ–295)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲ್ಲಾಹನು ಲೇಖರಾಮನಿಗಾಗಿ ಗೋಪಾಲ ಸಾಮಿರಿಯ ಹೆಸರನ್ನು ನೀಡಿದ್ದಾನೆ. ಈ ಹೆಸರು ನೀಡುವ ಮರ್ಮವೇನೆಂದರೆ ಹಬ್ಬದ ಮರುದಿನ ಅವನ ವಿನಾಶದ ಸಮಾಗ್ರಿ ಸಿದ್ಧಗೊಳ್ಳುವುದು. ಗೋಪಲ ಸಾಮಿರಿಗೆ ಆದಂತೆ ಗೋಪಾಲ ಸಾಮಿರಿಯ ಮೇಲೆ ಅಧಿಕಾರವಾಗಿ ಚೂರಿ ಚಲಿಸುತ್ತಿರುತ್ತದೆ. ಆದುದರಿಂದ ಇಜಲ್ ಪದದಲ್ಲಿ ದಿವ್ಯವಾಣಿಯಲ್ಲಿ ಬಳಸಲಾದ ಪದವು ಗೌಪ್ಯ ರೀತಿಯ ಸಾವು ಹೊಂದಿರುತ್ತದೆ.(ಸಿರಾಜೆ ಮುನೀರ್, ರೂಹಾನಿ ಖಝಾಇನ್, ಸಂಪುಟ–12 ಅಡಿಟಿಪ್ಪಣಿ ಪುಟ–68)

ಅಂದಹಾಗೆ **"ಇಜ್‌ಲುನ್ ಜಸದಲ್ಲಹು ಖುವಾರುನ್ ಲಹೂ ನಸಬುವ್ವ ಅಝಾಬ್"** ಭವಿಷ್ಯವಾಣಿಯಲ್ಲಿ ಇಜಿಲ್ ಪದ ಇಟ್ಟು ಅಲ್ಲಾಹನು ಸಂಕೇತಿಸಿದ್ದೇನೆಂದರೆ ಹತ್ಯೆಯ ಮೂಲಕ ಲೇಖರಾಮನು ಹತನಾಗುವನು ಎಂದು. ಅದಲ್ಲದೇ ಇನ್ನು ಸಂಕೇತಗಳಿವೆ. ಆ ಮೂಲಕ ಹತ್ಯೆಯ ವಿವರ ತಿಳಿದು ಬರುತ್ತದೆ. ಪ್ರಯುಕ್ತ ಆ ಪೈಕಿ ಒಂದು ದಿವ್ಯ ಸ್ವಪ್ನದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಲೇಖರಾಮನನ್ನು ಶಿಕ್ಷಿಸಲು ಒಬ್ಬ ಶಕ್ತಿಪಿಪಾಸಿ ದೂತನನ್ನು ಕಂಡಿರುತ್ತಾರೆ. ಆ ದಿವ್ಯ ಸ್ವಪ್ನ ಹೀಗಿದೆ. ಅವರು ನುಡಿಯುತ್ತಾರೆ.

ಇಂದು 2 ಏಪ್ರಿಲ್ 1893, 14 ರಂಝಾನ್ ತಿಂಗಳು 1310 ಹಿಜರಿ ಮುಂಜಾನೆಯ ಸಮಯ ಒಂದಿಷ್ಟು ನಿದ್ರೆಯ ಅಮಲಿನಲ್ಲಿ ನಾನು ಒಂದು ವಿಶಾಲವಾದ ಮನೆಯಲ್ಲಿ ಕುಳಿತುಕೊಂಡಿರುತ್ತೇನೆ. ಕೆಲ ಮಿತ್ರರು ಸಹ ನನ್ನ ಜೊತೆಗಿದ್ದಾರೆ. ಅಷ್ಟರಲ್ಲಿ ಒಬ್ಬ ಅಜಾನುಭಾವುವಾದ ವಿಚಿತ್ರ ರೂಪವುಳ್ಳ ವ್ಯಕ್ತಿ ಅವನ ಮುಖದಿಂದ ರಕ್ತ ಪುಟಿಯುವಂತೆ ಕಾಣುತ್ತದೆ. ನನ್ನ ಮುಂದೆ ಬಂದು ನಿಂತನು. ನಾನು ದೃಷ್ಟಿ ಹಾಯಿಸಿ ನೋಡಿದರೆ ಅವನೊಬ್ಬ ಹೊಸ ರೀತಿಯ ಸೃಷ್ಟಿ ಮತ್ತು ಸ್ವಭಾವವುಳ್ಳವ ವ್ಯಕ್ತಿಯಾಗಿದ್ದನು. ಅಂದರೆ ಅವನು ಮನುಷ್ಯನಲ್ಲ. ದೇವದೂತರ ಪೈಕಿ ಕಾಣುತ್ತಿದ್ದನು. ಹೃದಯದ ಮೇಲೆ ಅವನ ಭಯ ಆವರಿಸುತಿತ್ತು. ನಾನು ಅವನನ್ನು ನೋಡುವುದರಲ್ಲೇ ಇದ್ದೆ. ಅವನು ಕೇಳಿದನು ಲೇಖರಾಮ ಎಲ್ಲಿದ್ದಾನೆ. ಅದೇ ರೀತಿ ಇನ್ನೊಬ್ಬ ವ್ಯಕ್ತಿಯ ಹೆಸರು ಹೇಳಿ ಅವನೆಲ್ಲಿದ್ದಾನೆ ಎಂದು ಕೇಳಿದನು. ಆಗ ನಾನು ತಿಳಿದುಕೊಂಡೆ. ಈ ವ್ಯಕ್ತಿ ಲೇಖರಾಮ ಮತ್ತು ಇನ್ನೊಬ್ಬ ವ್ಯಕ್ತಿಯ ಶಿಕ್ಷೆಗೋಸ್ಕರ ನಿಯುಕ್ತಗೊಂಡಿದ್ದಾನೆಂದು. ಆದರೆ ಆ ಇನ್ನೊಬ್ಬ ವ್ಯಕ್ತಿ ಯಾರೆಂಬುದನ್ನು ನನಗೆ ಗೊತ್ತಿರಲಿಲ್ಲ. ಹೌದು ದಿಟವಾಗಿ ಹೇಳಬಹುದು. ಆ ಇನ್ನೊಬ್ಬ ವ್ಯಕ್ತಿ ನಾನು ಜಾಹೀರಾತಿನಲ್ಲಿ ಪ್ರಕಟಿಸಿದ್ದ ವ್ಯಕ್ತಿಗಳಲ್ಲಿಯೇ ಒಬ್ಬನಾಗಿದ್ದನು. ಅದು ಭಾನುವಾರದ ದಿನ ಮತ್ತು ಮುಂಜಾನೆಯ ಸಮಯವಾಗಿತ್ತು. **ಫಲ್‌ಹಮ್ದುಲಿಲ್ಲಾಹಿ ಅಲಾ ಝಾಲಿಕ್.** (ಬರಕಾತುದ್ದುಆ, ರೂಹಾನಿ ಖಝಾಇನ್, ಸಂಪುಟ–6, ಪುಟ–33)

ಅಜಾನುಭಾವುವಾದ ವಿಚಿತ್ರ ರೂಪವುಳ್ಳ ಅವನ ಮುಖದಿಂದ ರಕ್ತ ಪುಟಿಯುವಂತೆ ಕಾಣುತಿತ್ತು." ಪದಗಳ ಮೂಲಕ ಅವನ ಹತ್ಯೆಯ ವಿವರ ಮೊದಲೇ ನೀಡಲಾಗಿತ್ತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಯಾವ ಭವಿಷ್ಯವಾಣಿಗಳ ಮೂಲಕ ಅವನು ಹತ್ಯೆಯಾಗುವನು ಎಂದು ಸಾಬೀತಾಗುತ್ತದೆ ಎಂಬ ವಿಷಯ ನೆನಪಿರಲಿ. ಅವು ಮೂರು ಮಾತುಗಳಿವೆ. ಪ್ರಥಮವಾಗಿ ಒಂದು ಭವಿಷ್ಯವಾಣಿ "ಬರಕಾತುದ್ದುಆ" ಪತ್ರಿಕೆಯಲ್ಲಿ ಲೇಖರಾಮನ ಜೀವನದ ಬಗ್ಗೆ ಬರೆಯಲಾಗಿತ್ತು. ಅದರಿಂದ ಅವನ ಹತ್ಯೆಯ ವಿಷಯ ಸ್ಪಷ್ಟವಾಗಿ ತಿಳಿದುಬರುತ್ತದೆ. ಅದಾವುದೆಂದರೆ 'ಇಜ್‌ಲು ಜಸದಲ್ಲಹು ಖುವಾರು. ನಸಬು ವ–ಅಝಾಬ್' ಈ ಭವಿಷ್ಯವಾಣಿಯಲ್ಲಿ ಸ್ಪಷ್ಟವಾದ ರೀತಿಯಲ್ಲಿ ಹತ್ಯೆಯ ಕಡೆ ಬೊಟ್ಟು ಮಾಡಲಾಗಿದೆ. ಏಕೆಂದರೆ ಅವನಿಗೆ ಗೋಪಾಲ ಸಾಮಿರಿ ರೀತಿಯ ಶಿಕ್ಷೆ ನಿಗದಿಪಡಿಸಲಾಗಿದೆ ಎಂದು ತಿಳಿಸಲಾಗಿತ್ತು. ಲೇಖರಾಮನ ಹತ್ಯೆಯ ಕುರಿತು ಎರಡನೆಯ ಭವಿಷ್ಯವಾಣಿ, ಅದೊಂದು ದಿವ್ಯ ಸ್ವಪ್ನವಿದೆ. ಅದು ಬರಕಾತುದ್ದುಆ ಟಿಪ್ಪಣಿ ಅಡಿಯಲ್ಲಿ ನಮೂದಿಸಲಾಗಿದೆ. (ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–22, ಪುಟ–297)

ಹಾಗೇ ಮುಂದುವರೆದು ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ನಾನು ಹೇಳಿದ ಹಾಗೆ ಹತ್ಯೆಯ ಕುರಿತು ಮೂರು ದಿವ್ಯವಾಣಿಗಳಿವೆ. ಮೊದಲನೆಯದಾಗಿ ಓರ್ವ ರಕ್ತಪಿಪಾಸಿ ದೂತನನ್ನು

ನನ್ನ ಮುಂದೆ ತೋರಿಸಲಾಯಿತು. ಅವನು ಕೇಳಿದನು. ಲೇಖರಾಮನು ಎಲ್ಲಿದ್ದಾನೆಂದು. ಎರಡನೆಯದಾಗಿ ಆದ ದಿವ್ಯವಾಣಿ ಎಂದರೇ –**"ಇಜ್‌ಲುನ್ ಜಸದಲ್ಲಹು ಖುವಾರುನ್ ಲಹೂ ನಸಬುವ್ವ ಅರ್ಜ಼ಾಬ್"** ಅಂದರೆ ಲೇಖರಾಮನು ಗೋಪಾಲ ಸಾಮಿರಿಯಾಗಿದ್ದಾನೆ. ಅವನ ದೇಹ ಗೋಪಾಲ ಸಾಮಿರಿ ರೀತಿಯಲ್ಲಿ ಛಿದ್ರಗೊಳ್ಳುವುದು. ಮೂರನೆಯದಾಗಿ ಕವನದ ಆ ಸಾಲು ಇದೆ. ಆ ಸಾಲು ಹೀಗಿದೆ.

ಅಲಾ ಅಯ್ ದುಶ್ಮನೆ ನಾದಾಣ ವಬೇ ರಾಹ್
ಬತರ್ಸ್ ಅಜ಼್ ತೇಗ್ ಬುರ್ರಾನೆ ಮುಹಮ್ಮದ್

ಅಂದರೆ ಹೇ ಲೇಖರಾಮ, ನೀನು ಏಕೆ ಹಜ಼್ರತ್ ಮುಹಮ್ಮದ್(ಸ) ಅವರನ್ನು ಬಯ್ಯುತಿದ್ದಿಯಾ? ನೀನು ಹಜ಼್ರತ್ ಮುಹಮ್ಮದ್(ಸ) ರವರ ಖಡ್ಗದಿಂದ ಛಿದ್ರಗೊಳ್ಳುವುದರಿಂದ ಏಕೆ ಹೆದರುವುದಿಲ್ಲ? ಈಗ ನಾನು ಸಂಪೂರ್ಣ ಸಾಲುಗಳ ಇಲ್ಲಿ ಬರೆಯುತ್ತಿದ್ದೆವು. ಮೇಲ್ಕಾಣಿಸಿದ ಸಾಲು ಅದರಲ್ಲಿದೆ. ಒಂದು ದಿವ್ಯವಾಣಿಯ ಸಾಲಾಗಿದೆ. ಲೇಖರಾಮ ಪೇಶಾವರಿ ಶವದ ಚಿತ್ರ ಬರೆದಿದ್ದೇನೆ. ಅದನ್ನು ಸ್ವಯಂ ಆರ್ಯ ಸಾಹೇಬರುಗಳೇ ಮುದ್ರಿಸಿಕೊಟ್ಟಿದ್ದಾರೆ. ನಮಗೆ ಆ ನತಭಾಗ್ಯ ಲೇಖರಾಮನ ಸ್ಥಿತಿಯ ಬಗ್ಗೆ ಕನಿಕರ ಎನಿಸುತ್ತದೆ. ಕೆಲವು ದಿನ ಇಸ್ಲಾಮ್ ಧರ್ಮದ ಬಗ್ಗೆ ಅಸಭ್ಯ ಭಾಷೆ ಬಳಸಿ ಕೊನೆಯಲ್ಲಿ ಅವನು ಮೃತಪಟ್ಟನು. ಅವನು ಸುಮಾರು ಎರಡು ತಿಂಗಳವರೆಗೆ ಖಾದಿಯಾನಿಯಲ್ಲಿ ನನ್ನ ಬಳಿಯಿದ್ದನು. ಮೊದಲು ಅವನು ಹೀಗಿರಲಿಲ್ಲ ಆದರೆ ದುಷ್ಟರು ಧರ್ಮವಾಗಿದ್ದರೆ ಮತ್ತು ಅಗೋಚರ ಆಧ್ಯಾತ್ಮ ಜ್ಞಾನ ಲಭಿಸುವಂತಾದರೆ ನಾನು ಇಸ್ಲಾಂ ಧರ್ಮ ಸ್ವೀಕರಿಸಲು ಇಷ್ಟಪಡುವೆನು ಎಂದಿದ್ದ. ಆದರೆ ಖಾದಿಯಾನಿನ ಕೆಲ ದುಷ್ಟ ಸ್ವಭಾವದ ಜನರು ಅವನ ಮನಸ್ಸನ್ನು ಕೆಡಿಸಿಬಿಟ್ಟರು. ನನ್ನ ಬಗ್ಗೆಯೂ ಆ ದುಷ್ಟ ಮುರ್ಖ, ಹಿಂದೂಗಳು ಸುಳ್ಳು ವಿಷಯಗಳನ್ನು ಅವನಿಗೆ ಮನವರಿಕೆ ಮಾಡಿಕೊಟ್ಟು ನನ್ನಿಂದ ದೂರಮಾಡಿದರು. ಆ ದುಷ್ಟರ ಸ್ವಭಾವದಿಂದಾಗಿ ದಿನೇ ದಿನೇ ಅವಗುಣಗಳಿಗೆ ಗುರಿಯಾದನು ಆದರೆ ನಾನು ತಿಳಿದ ಮಟ್ಟಿಗೆ ಪ್ರಾರಂಭದಲ್ಲಿ ಅವನ ಸ್ಥಿತಿ ಹೀಗಿರಲಿಲ್ಲ. ಕೇವಲ ಧರ್ಮಿಕ ಉತ್ಸಹ ಹೊಂದಿದ್ದ. ಅದು ಎಲ್ಲಾ ಧರ್ಮದವರು ತಮ್ಮ ಧರ್ಮದ ಬಗ್ಗೆ ಹೊಂದಿರುತ್ತಾರೆ. ಅವನು ತನ್ನ ಹತ್ಯೆಯ ಒಂದು ವರ್ಷ ಮೊದಲು ಲಾಹೋರ್ ಸ್ಟೇಷನ್‌ನ ಒಂದು ಸಣ್ಣದಾದ ಮಸೀದಿಯಲ್ಲಿ ನನ್ನನ್ನು ಭೇಟಿಯಾಗಿದ್ದನು. ನಾನು ಆಗ ವುಜ಼ು ಮಾಡುತ್ತಿದ್ದೆ. ಅವನು ನನಗೆ ನಮಸ್ತೆ ಎಂದು ಹೇಳಿ ಕೆಲ ಕಾಲ ನಿಂತು ಹೊರಟು ಹೋದನು. ನಮಾಜ಼್‌ಗೆ ಸಮಯವಾದ ಕಾರಣ ಅವನೊಂದಿಗೆ ನನಗೆ ಮಾತನಾಡಲು ಸಾಧ್ಯವಾಗಲಿಲ್ಲ ಎಂದು ನನಗೆ ವಿಷಾದವಿದೆ. ಖಾದಿಯಾನಿನ ಹಿಂದೂಗಳು ಅವನಿಗೆ ನನ್ನ ಮಾತುಗಳನ್ನು ಕೇಳಲು ಅವಕಾಶ ನೀಡಲಿಲ್ಲ. ಸುಳ್ಳು ಹೇಳಿ ಅವನನ್ನು ರೇಗಿಸಿದರು. ನಾನು ದಿಟವಾಗಿ ಹೇಳಬಲ್ಲೆ, ಅವನ ರಕ್ತದ ಹೊಣೆ ಅವರುಗಳ ಕುತ್ತಿಗೆಯ ಮೇಲಿದೆ. ಇಷ್ಟಾಗಿಯೂ ಅವನು ತನ್ನ ಸ್ವಭಾವದಲ್ಲಿ ಸರಳತೆ ಹೊಂದಿದ್ದ. ಏಕೆಂದರೆ ದುಷ್ಟರ ಮಾತುಗಳನ್ನು ಕೇಳಿ ಏನು ಯೋಚಿಸದೆ, ವಿಚಾರಿಸದೇ ಅವರ ಮಾತುಗಳನ್ನು ನಂಬುತ್ತಿದ್ದ. ಆ ಕಾರಣದಿಂದ ಅಲ್ಲಾಹನು ಅವನಿಗೆ ಓರ್ವ ಗೋಪಾಲನೊಂದಿಗೆ ಹೋಲಿಕೆ ನೀಡಿದ್ದಾನೆ. ಅಂತೂ ಅವನ ಅಕಾಲ ಮರಣದಿಂದ ನಾವು ವಿಷಾದ ವ್ಯಕ್ತಪಡಿಸದೇ ಇರಲಾರೆವು ಆದರೆ ಏನು ಮಾಡುವುದು ಅಲ್ಲಾಹನಿಂದ ವಿಧಿಸಲ್ಪಟ್ಟ ವಿಧಿ ಪೂರ್ಣವಾಗುವುದು ಅನಿವಾರ್ಯವಾಗಿತ್ತು. (ಹಖೀಖತುಲ್ ವಹಿ, ರೂಹಾನಿ ಖಜ಼ಾಈನ್, ಸಂಪುಟ–22, ಪುಟ–301)

ಭವಿಷ್ಯವಾಣಿಯಲ್ಲಿ ಹತ್ಯೆಯ ಪದವಿಲ್ಲದಿದ್ದರೂ ಭವಿಷ್ಯವಾಣಿಯ ಪದಗಳಿಂದ ಮತ್ತು ಅದರ ವ್ಯಾಖ್ಯಾನದಿಂದ ಅವಶ್ಯವಾಗಿ ತಿಳಿಯಬಹುದು. ಲೇಖರಾಮನ ಮರಣ ಹತ್ಯೆಯಿಂದಾಗುವುದು ಎಂದು. ಆಮ್ ಪತ್ರಿಕೆ 18 ಮಾರ್ಚ್ 1897 ಪುಟ 3 ರಲ್ಲಿ ಹೀಗೆ ಬರೆದಿರುತ್ತದೆ. "ತರಹ ತರಹದ ಊಹಾಪೋಹಗಳು ಹಬ್ಬಿವೆ. ಖಾದಿಯಾನಿ ಸಾಹೇಬರ ವರ್ತನೆ ಎಲ್ಲರಿಗಿಂತ ಆಶ್ಚರ್ಯಕರವಾಗಿದೆ. ಅತ್ಯಂತ ವಿಷಾದದಿಂದ ಸ್ವೀಕರಿಸಬೇಕಾಗುತ್ತದೆ. ಅವರು ದಿವ್ಯವಾಣಿಯ ಮೂಲಕ ಲೇಖರಾಮನ ಹತ್ಯೆಯ ಕುರಿತು ಭವಿಷ್ಯವಾಣಿ ಮಾಡಿದ್ದರು. ಈಗ ಅದೇ ದಿವ್ಯವಾಣಿಯ ಮೂಲಕ ಅವರ ಹತ್ಯೆ ಯಾದರೆಂಬುದು ತಿಳಿಸುವುದು ಅವರ ಕರ್ತವ್ಯವಾಗಿರುತ್ತದೆ. (ಸಿರಾಜೆ ಮುನೀರ್ ಪುಟ 47 ಟಿಪ್ಪಣಿ)

ಹಾಗೆ ಭವಿಷ್ಯವಾಣಿಯಲ್ಲಿ ಹತ್ಯೆಯ ಕಡೆ ಬೊಟ್ಟು ಮಾಡಲಾಗಿತ್ತು ಎಂಬುದನ್ನು ಜನರು ತಿಳಿದುಕೊಂಡಿದ್ದರು ಎಂಬ ಅಂಶ ಅದರಿಂದ ತಿಳಿದುಬರುತ್ತದೆ. ಇದೀಗ ಈ ಕೆಳಗೆ ನಾವು ಸಯ್ಯದ್‌ನಾ ಹಜ಼್ರತ್ ಮಸೀಹ್ ಮೌಊದ್(ಅ) ರವರ ಬಹುಮಾನದ ಪಂಥಹ್ವಾನದ ಬಗ್ಗೆ ಇರುವ ಪದಗಳನ್ನು ಪ್ರಸ್ತುತಪಡಿಸುತ್ತೇವೆ. ಅವರು ರಾಜಕುಮಾರ ವಾಳಾ ಗೋಹರ್ extra Assistent Jehleum ಅವರನ್ನು ಸಂಬೋಧಿಸಿ ಹೇಳಿದರು.

**ಲಾನತುಲ್ಲಾಹಿ ಅಲಲ್ ಕಾಜ಼ಿಬೀನ್**, ಬನ್ನಿ ನಮ್ಮ ಸಮಕ್ಷಮದಲ್ಲಿ ನಮ್ಮ ಗ್ರಂಥಗಳನ್ನು ನೋಡಿ ಅದರಲ್ಲಿ ವಿವಿಧ ಸ್ಥಳಗಳಲ್ಲಿ ಈ ಭವಿಷ್ಯವಾಣಿ ನಮೂದಿಸಲ್ಪಟ್ಟಿದೆ. ಅದರಿಂದ ವಿವರ ಸಾಬೀತುಗೊಳ್ಳದಿದ್ದರೆ ಅದೇ ಜಲ್ಸದಲ್ಲಿ ನಿಮಗೆ ಎರಡು ನೂರು ರೂಪಾಯಿಗಳ ಬಹುಮಾನ ನೀಡಲಾಗುವುದು. (ಅಯ್ಯಾಮುಸ್ಸುಲಹ, ರೂಹಾನಿ ಖಜ಼ಾಈನ್, ಸಂಪುಟ–14, ಪುಟ–418)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಜ಼್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಜ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಜ಼ಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಜ಼ಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಜ಼ಿಯಾ, ಖಾದಿಯಾನ್)**

## ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಜ಼್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಜ಼ಾತ್, ಸಂಪುಟ–3, ಪುಟ–284)**

**(ರಿಶ್ತನಾತ ವಿಭಾಗ, ನಜ಼ಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 05 May 2022, Issue No. 18

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 17ರ ಉಳಿದ ಭಾಗ)**

ಹುಝೂರ್ ಅನ್ವರ್ ಹೇಳಿದರು. ನನ್ನ ಕೃತಜ್ಞತೆಗೆ ಇನ್ನೊಂದು ಕಾರಣ ನಾನು ಯಾವ ಪ್ರವಾದಿಯವರನ್ನು ನಂಬುತ್ತೇನೋ ಅವರ ನುಡಿಯಾಗಿದೆ. ಯಾರು ಜನರಿಗೆ ಕೃತಜ್ಞರಾಗುವುದಿಲ್ಲವೋ ಅವರು ದೇವನೊಂದಿಗೆ ಕೃತಜ್ಞರಾಗಿರಲು ಸಾಧ್ಯವಿಲ್ಲ. ಅಂದರೆ ಈ ಕೃತಜ್ಞತೆ ನನ್ನ ಆರಾಧನೆಯ ಒಂದು ಭಾಗವಾಗಿದೆ. ಇಲ್ಲದಿದ್ದರೆ ನನಗೆ ಮಸೀದಿಗೆ ಹೋಗಿ ಆರಾಧಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಹೀಗೆ ಆದುದರಿಂದ ನಾನು ಮೊಟ್ಟ ಮೊದಲು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ನೀವು ಇಲ್ಲಿ ಆಗಮಿಸಿದ್ದೀರಿ. ಇಷ್ಟು ದೀರ್ಘ ಸಮಯವಾದುದ್ದಕ್ಕೆ ಕ್ಷಮೆಯೂ ಕೋರುತ್ತೇನೆ.

ಹುಝೂರ್ ಅನ್ವರ್ ನುಡಿದರು. ನಮ್ಮ ದೃಷ್ಟಿಯಲ್ಲಿ ಮಸೀದಿಯು ಅಲ್ಲಾಹನ ಮನೆಯಾಗಿದೆ ಮತ್ತು ಎಲ್ಲಾ ಆರಾಧನೆ ಸ್ಥಾನಗಳು ಅಲ್ಲಾಹನ ಮನೆಗಳಾಗಿರುತ್ತವೆ. ಆದುದರಿಂದಲೇ ಮಕ್ಕದ ಅವಿಶ್ವಾಸಿಗಳು ರಸೂಲುಲ್ಲಾಹ್(ಸ) ಹಿಜ್ರತ್(ವಲಸೆ) ಆದ ನಂತರ ಮದೀನಕ್ಕೆ ಹೋದಾಗ ಅವರ ಮೇಲೆ ಆಕ್ರಮಣ ಮಾಡಲಾಯಿತು. ಆ ಸಮಯ ಮುಸಲ್ಮಾನರ ಬಳಿ ಯಾವ ಯುದ್ಧ ಸಾಮಗ್ರಿಗಳು ಇರಲಿಲ್ಲ. ಆ ಸಮಯ ಮುಸಲ್ಮಾನರಿಗೆ ತಾಳ್ಮೆ ವಹಿಸುವ ಆಜ್ಞೆಯಾಯಿತು. ಬಹಳಷ್ಟು ತಾಳ್ಮೆವಹಿಸಿದರು. 13 ವರ್ಷಗಳವರೆಗೆ ತಾಳ್ಮೆವಹಿಸಿದರು. ಈ ಶತ್ರುಗಳ ಕೈ ತಡಯಬೇಕಾಗಿದೆ. ಮತ್ತು ಕಠಿಣವಾಗಿ ವರ್ತಿಸಿ ಎಂದು ಹೇಳಿದರು. ಕಠಿಣವಾಗಿ ಏಕೆ ವರ್ತಿಸಬೇಕೆಂದರೆ–ಇಂದು ಅವರನ್ನು ಕಠಿಣವಾಗಿ ವರ್ತಿಸಿಲ್ಲ ಎಂದಾದರೆ, ಅವರು ಧರ್ಮವಿರೋಧಿಗಳಾಗಿದ್ದಾರೆ. ಅವರಿಗೆ ಆರಾಧನಾ ಸ್ಥಳಗಳು ಬೇಕಾಗಿಲ್ಲ. ಅವರು ಯಾವ ಧರ್ಮದಿಂದಲೂ ಸಂಬಂಧ ಬಯಸುವವರಲ್ಲ. ಅವರು ಎಲ್ಲಾ ಆರಾಧನಾ ಮಂದಿರಗಳನ್ನು ಅಳಿಸಿಹಾಕುವರು, ಆದುದರಿಂದ ಪವಿತ್ರ ಖುರ್‌ಆನ್‌ನಲ್ಲಿ ಬಹು ಸ್ಪಷ್ಟವಾಗಿ ಬರೆಯಲಾಗಿದೆ. ಅವರ ಕೈಗಳನ್ನು ತಡೆಯದಿದ್ದರೆ ಯಾವ ಚರ್ಚೆ ಉಳಿಯಲಿಕ್ಕಿಲ್ಲ, ಯಾವ ಸೇನಗಾಗ್ ಉಳಿಯಲಿಕ್ಕಿಲ್ಲ. ಯಾವ ಆರಾಧನೆ ಮಂದಿರವು ಉಳಿಯಲಿಕ್ಕಿಲ್ಲ, ಮಸೀದಿಯೂ ಸಹ ಉಳಿಯಲಿಕ್ಕಿಲ್ಲ. ಅಂದರೆ ಮುಸಲ್ಮಾನರು ಕೇವಲ ಮಸೀದಿಗಳನ್ನು ರಕ್ಷಿಸಿಲ್ಲ. ಬದಲು ಎಲ್ಲಾ ಆರಾಧನಾ ಮಂದಿರಗಳನ್ನು ರಕ್ಷಿಸಬೇಕಾಗಿದೆ. ಚರ್ಚಿನ ಪಾವಿತ್ರ್ಯತೆಯನ್ನು ರಕ್ಷಿಸಬೇಕಾಗಿದೆ, ಸೇನಾಗಾರರನ್ನೂ ರಕ್ಷಿಸಬೇಕಾಗಿದೆ. ಮತ್ತು ಇತರ ಮಂದಿರಗಳು ಹಾಗೂ ಆರಾಧನಾ ಸ್ಥಳಗಳನ್ನು ರಕ್ಷಿಸಬೇಕಾಗಿದೆ.

ಹುಝೂರ್ ಅನ್ವರ್ ಹೇಳಿದರು. ಮಸೀದಿ ಜೊತೆಗಿರುವ ನಮ್ಮ ಶಿಕ್ಷಣ ಇದಾಗಿದೆ. ಅಂದರೆ ಒಂದು ಕಾರ್ಯಯೋಜನೆ ಇದೆ. ಎಂದರೆ ನಾವು ಎಲ್ಲಾ ಧರ್ಮಾನುಯಾಯಿಗಳಿಗೆ ಆದರ ನೀಡುವುದಲ್ಲದೆ ಅವರ ನೇತಾರರಿಗೆ ಗೌರವ ಆದರ ನೀಡದಿದ್ದರೆ ನಮ್ಮ ಆರಾಧನೆಗಳೇ ಪರಿಪೂರ್ಣವಾಗುವುದಿಲ್ಲ ಎಂದು ಭಾವಿಸುತ್ತೇವೆ. ಅಷ್ಟೇ ಅಲ್ಲ ಯಾವುದೇ ಇತರ ಧರ್ಮಗಳ ಆರಾಧನಾ ಸ್ಥಳಗಳನ್ನು ರಕ್ಷಿಸಲು ಕರೆದರೆ ಅದಕ್ಕಾಗಿ ಅಹ್ಮದಿಯಾ ಜಮಾಅತ್ ಎಲ್ಲಾ ಸಮಯಕ್ಕೂ ಸಿದ್ಧವಿರುತ್ತದೆ. ಅಲ್ಲಾಹನು ನಮಗೆ ಆರಾಧನೆ ಮಾಡಲು ಆಜ್ಞಾಪಿಸಿರುತ್ತಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಸಂಖ್ಯಾತ ಸ್ಥಳಗಳಲ್ಲಿ ಈ ಆಜ್ಞೆ ಬಂದಿರುತ್ತದೆ. ಭಯಭಕ್ತಿಯನ್ನು ಅನುಸರಿಸಿರಿ ಎಂದು. ಭಯ ಭಕ್ತಿ ಎಂದರೇನು? ಭಯ ಭಕ್ತಿ ಎಂದರೆ ಅಲ್ಲಾಹನನ್ನು ನಂಬುವುದು ಹಾಗೂ ಅವನ ಆರಾಧನೆಯನ್ನು ಮಾಡುವುದು ಮತ್ತು ಅವನ ದಾಸರ ಹಕ್ಕುಗಳನ್ನು ಪಾಲಿಸುವುದು ಅಹಂಕಾರ ಮತ್ತು ಮತ್ಸರಗಳನ್ನು ದೂರ ಮಾಡಿರಿ. ವಿನಯವನ್ನು ರೂಢಿಸಿಕೊಳ್ಳಿರಿ. ವಿನಯದಿಂದ ಮಾನವರ ತಮ್ಮ ಸಹೋದರರ, ತಮ್ಮ ಸಮುದಾಯದಲ್ಲದೇ ಇಡೀ ಲೋಕದ ಜನರ ಸೇವೆಯನ್ನು ಮಾಡಿರಿ. ಮಸೀದಿಗೆ ಬರುವವರಿಗೆ ಇವುಗಳನ್ನು ಪಾಲಿಸುವ ಆಜ್ಞೆಯಿರುತ್ತದೆ. ಇವುಗಳನ್ನು ಪಾಲಿಸಿದಾಗ ಮಾತ್ರ ಅಲ್ಲಾಹನು ನಮ್ಮಿಂದ ಸಂತುಷ್ಟನಾಗುವನು. ಆಗ ಆರಾಧನೆಗಳ ಹಕ್ಕು ಪಾಲಿಸಿದಂತಾಗುವುದು.

ಹುಝೂರ್ ಅನ್ವರ್ ನುಡಿದರು. ನನ್ನ ಮುಂದೆ ಅಹ್ಮದಿಯೇತರರೇ ಹೆಚ್ಚು ಸಂಖ್ಯೆಯಲ್ಲಿ ಕುಳಿತುಕೊಂಡಿದ್ದಾರೆ. ಅಲ್ಲದೇ ನನ್ನ ಮುಂದೆ ಕುಳಿತಿರುವ ಅಹ್ಮದಿಯರು ಒಂದನೇ ಹತ್ತು (1/10) ಭಾಗ ಇರಬಹುದು ಅಷ್ಟೇ. ಹೊರಗೆ ಅವಶ್ಯವಾಗಿ ಇರಬಹುದು. ಅವರು ನನ್ನ ಮಾತುಗಳನ್ನು ಕೇಳುತ್ತಿರಬಹುದು. ಆದರೆ ನನ್ನ ಮುಂದೆ ಸ್ಥಳೀಯ ಜನರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ತಿಳಿದು ಬರುವುದೇನೆಂದರೆ ಅಹ್ಮದಿಯರು ಇಲ್ಲಿ ಒಳ್ಳೆಯ ಸಂಬಂಧಗಳನ್ನು ಇಟ್ಟುಕೊಂಡಿದ್ದಾರೆ. ಇನ್‌ಶಾಅಲ್ಲಾಹ್ ಈ ಮಸೀದಿಯ ನಿರ್ಮಾಣವಾದ ನಂತರ ಅದರ ಉದ್ದೇಶವೇ ಈ ಸಂಬಂಧಗಳನ್ನು ವಿಸ್ತರಿಸುವುದಾಗಿದೆ. ಮತ್ತು ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವುದಾಗಿದೆ. ಅಹ್ಮದಿಯರು ಈ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುವರು ಎಂದು ಆಶಿಸುತ್ತೇನೆ.

ಹುಝೂರ್ ಅನ್ವರ್ ನುಡಿದರು. ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ನಾವು ವಾಗ್ದತ್ತ ಮಸೀಹ್ ಎಂದು ನಂಬುತ್ತೇವೆ. ಅವರು ಹೇಳುತ್ತಾರೆ, ನಾನು ಎರಡು ಉದ್ದೇಶಗಳನ್ನು ಈಡೇರಿಸಲು ಬಂದಿರುತ್ತೇನೆ. ನನ್ನನ್ನು ನಂಬುವವರು ಈ ಎರಡು ಉದ್ದೇಶಗಳನ್ನು ಈಡೇರಿಸದಿದ್ದರೆ ಅವರು ನನ್ನ ಜಮಾಅತಿಗೆ ಸೇರಿದವರಲ್ಲ, ನಿಮಗೆ ಅಹ್ಮದಿ ಮುಸಲ್ಮಾನರೆಂದು ಕರೆಯಿಸಿಕೊಳ್ಳುವುದರಿಂದ ಯಾವ ಪ್ರಯೋಜನ ಇಲ್ಲ. ಇತರ ಗುಂಪಿನವರ ಹಾಗೆ ಉಗ್ರವಾದಿಗಳೆಂದೇ ಪರಿಗಣಿಸುವಿರಿ, ಆ ಎರಡು ಉದ್ದೇಶಗಳು ಹೀಗಿವೆ.

ಅವರು(ಅ) ನುಡಿದರು. ನನ್ನ ಆಗಮನದ ಒಂದು ಉದ್ದೇಶವು ಮನುಷ್ಯನ ಸೃಷ್ಟಿಕರ್ತನೊಂದಿಗಿನ ಸಂಬಂಧ ನಿಕಟಗೊಳಿಸುವುದಾಗಿದೆ. ಅವನನ್ನು ಸರಿಯಾದ ರೀತಿಯಲ್ಲಿ ಆರಾಧಿಸುವವನನ್ನಾಗಿ ಮಾಡುವುದಾಗಿದೆ. ಎರಡನೆಯ ಉದ್ದೇಶವೆಂದರೆ ಮನುಷ್ಯರ ಒಬ್ಬರಿಗೆ ಮತ್ತೊಬ್ಬರೊಡನೆ ಇರುವ ಹಕ್ಕುಗಳನ್ನು ಪಾಲಿಸುವುದರಲ್ಲಿ ಗಮನಹರಿಸುವುದಾಗಿದೆ. ಇವೆರಡು ಪ್ರಮುಖ ಉದ್ದೇಶಗಳಾಗಿವೆ. ಅದಕ್ಕಾಗಿಯೇ ಜಮಾಅತ್ ಅಹ್ಮದಿಯಾ ಸ್ಥಾಪಿಸಲಾಗಿದೆ. ಈ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಅಹ್ಮದಿಯಾ ಜಮಾಅತ್ ಲೋಕದ ಪ್ರತಿಯೊಂದು ನಗರ ಪ್ರತಿಯೊಂದು ಮೂಲೆಯವರೆಗೆ ಪಾಲಿಸಲು ಪ್ರಯತ್ನಿಸುತ್ತಿದೆ. ಅದಕ್ಕಾಗಿಯೇ ಮಸೀದಿಗಳನ್ನು ಸ್ಥಾಪಿಸಲಾಗುತ್ತದೆ.

ಹುಝೂರ್ ಅನ್ವರ್ ನುಡಿದರು. ಅದೇ ಕಾರಣದಿಂದ ಆಫ್ರಿಕಾ ಮತ್ತು ಇತರ ಬಡ ದೇಶಗಳಲ್ಲಿ ನಾವು ಮಾನವ ಸೇವೆ ಕೈಗೊಳ್ಳುತ್ತಿದ್ದೇವೆ. ಕೇವಲ ಧಾರ್ಮಿಕ ಜಮಾಅತ್ ಆಗುವ ಹಕ್ಕು ನಿಭಾಯಿಸುತ್ತಿಲ್ಲ. ಕೇವಲ ಆರಾಧನೆ ಕಡೆ ಗಮನಹರಿಸುತ್ತಿಲ್ಲ. ಬದಲು ಅಲ್ಲಾಹನ ಅನುಗ್ರಹದಿಂದ ನಮ್ಮ ಶಾಲೆಗಳು ನಡೆಯುತ್ತಿವೆ. ಯಾವ ತಾರತಮ್ಯವಿಲ್ಲದೇ ಶಾಲೆಗಳಲ್ಲಿ ಬಡ ಮಕ್ಕಳನ್ನು ಶಿಕ್ಷಣವನ್ನು ನೀಡುತ್ತಿದ್ದೇವೆ. ಅಲ್ಲದೇ ಹಲವು ದೇಶಗಳಲ್ಲಿ ನಮ್ಮ ಬಹಳಷ್ಟು ಶಾಲೆಗಳಲ್ಲಿ ಅಹ್ಮದಿಯರು ಏಕೆ ಯಾವ ಮುಸಲ್ಮಾನರು ಇಲ್ಲ. ಕ್ರೈಸ್ತರು ಮತ್ತು ನಾಸ್ತಿಕ ಜನರು ವಿದ್ಯೆ ಪಡೆಯುತ್ತಿದ್ದಾರೆ ಮತ್ತು ಯಾವುದೇ ತಾರತಮ್ಯವಿಲ್ಲದೇ ನಾವು ಅವರಿಗೆ ವಿದ್ಯೆ ನೀಡುವ ಪ್ರಯತ್ನ ಮಾಡುತ್ತಿದ್ದೇವೆ. ಅವುಗಳಲ್ಲಿ ಪ್ರಾಥಮಿಕ ಶಾಲೆಗಳೂ ಇವೆ. ಪ್ರೌಢ ಶಾಲೆಗಳು ಸಹ ಇವೆ.

**(ಮುಂದುವರಿಯುವುದು)**

### *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.